7. ನಿಯಮ 69 ಅಡಿಯಲ್ಲಿ ಚರ್ಚೆ:

ವಿಷಯ: ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ರೂಲ್ 60 ರಡಿಯಲ್ಲಿ ಚರ್ಚೆಗೆ ಅವಕಾಶ ಕೊಡಬೇಕೆಂದು ಪ್ರಸ್ತಾಪ ಮಾಡಿದ್ದೆ.

ಅಧ್ಯಕ್ಷರು:– ನೀವು ಪ್ರಸ್ತಾಪ ಮಾಡಿದ ನಂತರದಲ್ಲಿ ಅದನ್ನು ನಿಯಮ 69 ಕ್ಕೆ ಕನವರ್ಟ್ ಮಾಡಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ:– ನೀವು ನನಗೆ ಹೇಳಿ ರೂಲ್ 69 ಕ್ಕೆ ಕನವರ್ಟ್ ಮಾಡಬೇಕಲ್ಲವೆ ಅಧ್ಯಕ್ಷರೆ?

ಅಧ್ಯಕ್ಷರು:– ನೀವು ಆಗ ಇರಲಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ:– ನೀವು 1 ಗಂಟೆ 30 ನಿಮಿಷಕ್ಕೆ ಸದನವನ್ನು adjourn ಮಾಡಿಬಿಟ್ಟಿದ್ದೀರಿ. ಸಾಮಾನ್ಯವಾಗಿ ನೀವು ಯಾವಾಗಲೂ ಸದನವನ್ನು 2.00 ಗಂಟೆ ಮೇಲೆಯೇ ಸದನವನ್ನು adjourn ಮಾಡುತ್ತಿದ್ದಿರಿ. ನಾವು ಮಾತನಾಡುವುದು ಬೇಡವೆಂದು ನಿಮಗನಿಸಿದರೆ ಹೇಳಿಬಿಡಿ, ನಾವು ಹೊರಗಡೆ ಹೊರಟುಹೋಗುತ್ತೇವೆ.

ಅಧ್ಯಕ್ಷರು:– ಈಗ ಸಬ್‌ಮಿಷನ್ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ವಿಚಾರದಲ್ಲಿ ರಾಜ್ಯದೆಲ್ಲೆಡೆ ಬಹಳ ತೊಂದರೆಯಾಗಿದೆ. ಈಗ ಕೇಂದ್ರ ಸರ್ಕಾರದ ಹೊಸ ನಾರ್ಮ್ಸ್ ಪ್ರಕಾರ ಎಲ್ಲಿಯೂ ಹೊಸದಾಗಿ ಬೋರ್‌ವೆಲ್ ಕೊರೆಸುವುದಕ್ಕೆ ಆಗುವುದಿಲ್ಲ. ಈಗ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಸುಮಾರು 32700 ಹಳ್ಳಿಗಳಿಗಾಗಿ 1850 ಕೋಟಿ ರೂ.ಗಳ ಹಣವನ್ನು ಕೊಡಲಾಗಿದೆಯೆಂದು ಹೇಳುತ್ತಿದ್ದಾರೆ. ಇದರಲ್ಲಿ ಕೇವಲ 72 ಕೋಟಿ ರೂ.ಗಳನ್ನು ಮಾತ್ರ ಖರ್ಚು ಮಾಡಿರುವುದು ಎನ್ನುವ ಮಾಹಿತಿಯಿದೆ. ಈ 72 ಕೋಟಿ ರೂ.ಗಳಲ್ಲಿ ಕೇಂದ್ರ ಸರ್ಕಾರದ 24 ಕೋಟಿ ಮತ್ತು ರಾಜ್ಯ ಸರ್ಕಾರದ 48 ಕೋಟಿ ರೂ.ಗಳು ಸೇರಿಕೊಂಡಿದೆ. ಕಳೆದ 2011 ರ ನವೆಂಬರ್‌ನಿಂದ ಇವತ್ತಿನವರೆಗೆ ರಾಜ್ಯದ ಸುಮಾರು 150

ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಈಗಾಗಲೇ ಡಿಕ್ಲರ್ ಮಾಡಲಾಗಿದೆ. ಇದಲ್ಲದೇ ಕೇಂದ್ರ ಸರ್ಕಾರದ ಕೃಷಿ ಮಂತ್ರಿಗಳು ರಾಜ್ಯ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ಇಡೀ ರಾಷ್ಟ್ರದಲ್ಲಿ ಕರ್ನಾಟಕದಲ್ಲಿ ಹೆಚ್ಚು ಬರಗಾಲವಿದ್ದು ನಂಬರ್ ಒನ್ ಸ್ಥಾನದಲ್ಲಿದೆಯೆಂದು ಹೇಳಿದ್ದಾರೆ. ತಾವು ಬೇಕಾದರೆ ಕೇಂದ್ರದ ಕೃಷಿ ಸಚಿವರು ಈ ರೀತಿಯ ಹೇಳಿಕೆಯನ್ನು ಕೊಟ್ಟಿರುವ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ನೋಡಬಹುದು. ಈಗ ಕೇಂದ್ರ ಸರ್ಕಾರದ ಹೊಸ ಗೈಡ್‌ಲೈನ್ಸ್ ಪ್ರಕಾರ ಎಲ್ಲಿಯೂ ಹೊಸದಾಗಿ ಬೋರ್‌ವೆಲ್ ಕೊರೆಸುವುದಕ್ಕೆ ಆಗುವುದಲ್ಲ. ರಾಜ್ಯ ಸರ್ಕಾರದ ಹಣವನ್ನೇ ಕೊಡಬೇಕಾಗುತ್ತದೆ. ಒಂದೊಂದು ವಿಧಾನಸಭಾ ಕ್ಷೇತ್ರಕ್ಕೂ ಕನಿಷ್ಟ 3 ಕೋಟಿ ರೂ.ಗಳನ್ನು ಕೊಡಬೇಕೆಂದು ಕಳೆದ ಎರಡ್ಮೂರು ತಿಂಗಳುಗಳಿಂದ ಹಲವಾರು ಬಾರಿ ಒತ್ತಾಯ ಮಾಡುತ್ತಲೇ ಬರುತ್ತಿದ್ದೇನೆ. ಇವತ್ತಿನವರೆವಿಗೂ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ಇತ್ತೀಚೆಗೆ ಮೊನ್ನೆ ಕಂದಾಯ ಇಲಾಖೆಯ ಸಚಿವರೂ ಆದ ಮಾನ್ಯ ಉಪ ಮುಖ್ಯಮಂತ್ರಿಗಳು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 60 ಲಕ್ಷ ರೂ.ಗಳಂತೆ ಈ ವಾರದಲ್ಲಿ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ನಾಳೆ ಏನೋ ಈ ವಿಚಾರದಲ್ಲಿ ಸಭೆ ಕರೆದಿದ್ದೇನೆ ಎಂದರು. ದಯಮಾಡಿ ಕೇಂದ್ರ ಸರ್ಕಾರದವನರನ್ನು ಈ ವಿಚಾರದಲ್ಲಿ ಅವರೂ ಕೂಡ ಕೇಳಬೇಕಾಗುತ್ತದೆ ಮತ್ತು ತಾವು ಕೂಡ ಕೇಳಬೇಕಾಗುತ್ತದೆ. ಇವತ್ತಿನವರೆವಿಗೆ ಕುಡಿಯುವ ನೀರಿಗಾಗಿ, ಬರಗಾಲ ಪೀಡಿತ ಪ್ರದೇಶಕ್ಕಾಗಿ ಎಷ್ಟು ಹಣವನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ, ರಾಜ್ಯ ಸರ್ಕಾರದವರು ಎಷ್ಟು ಹಣವನ್ನು ವಿನಿಯೋಗ ಮಾಡಿದ್ದೀರಿ ಎಂಬ ಬಗ್ಗೆ ಹೇಳಬೇಕಾಗುತ್ತದೆ. ಇವತ್ತು ಹಲವಾರು ಕಡೆಗಳಲ್ಲಿ ದನ-ಕರುಗಳಿಗೆ ಮೇವಿಲ್ಲ ಮತ್ತು ಕುಡಿಯಲು ನೀರೂ ಕೂಡ ಇಲ್ಲದ ಪರಿಸ್ಥಿತಿಯಿದೆ. ಇನ್ನು ಕೇಂದ್ರ ಸರ್ಕಾರದ ನಿಯಮದಂತೆ ಇವತ್ತು ಎಲ್ಲಿಯೂ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಹೀಗಾಗಿ ಜನ ಸಾಮಾನ್ಯರಿಗೆ ಒಂದು ಕಡೆ ಕೂಳಿಗಾಗಿ ಕಾಳು ಸಿಗುತ್ತಿಲ್ಲ. ಇನ್ನೊಂದು ಕಡೆ

ಕುಡಿಯುವ ನೀರೂ ಕೂಡ ಇಲ್ಲ. ಮತ್ತೊಂದು ಕಡೆ ದನ-ಕರುಗಳಿಗೆ ಮೇವಿಲ್ಲ. ಈಗಲಾದರೂ ಕೆರೆ ಕಟ್ಟೆಗಳಲ್ಲಿ ಗುಂಡಿಗಳನ್ನಾದರೂ ಹೊಡೆಸಿ ದನ-ಕರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗುತ್ತದೆ. ಈಗಾಗಲೇ ಈ ವಿಚಾರದಲ್ಲಿ ಮಾಡಿರುವ ಯೋಜನೆಗೆ ಕೇಂದ್ರ ಸರ್ಕಾರದಲ್ಲಿ 1857 ಕೋಟಿ ರೂ.ಗಳಿಗೆ ಅಪ್ರೂವ್ ಆಗಿದೆಯೆಂದು ಹೇಳುತ್ತಾರೆ. ಆದರೆ ಇವತ್ತಿನವರೆವಿಗೆ ಬಿಡುಗಡೆ ಆಗಿರುವ ಹಣದಲ್ಲಿ ಕೇಂದ್ರ ಸರ್ಕಾರದ್ದು 24 ಕೋಟಿ ಮತ್ತು ರಾಜ್ಯದ ಸರ್ಕಾರದಿಂದ ಬಿಡುಗಡೆಯಾಗಿರುವುದು ಕೇವಲ 48 ಕೋಟಿ ರೂ.ಗಳಾಗಿದ್ದು ಒಟ್ಟಾರೆಯಾಗಿ ಕೇವಲ 72 ಕೋಟಿ ರೂ.ಗಳು ಮಾತ್ರ. ಮಾನ್ಯ ಮುಖ್ಯಮಂತ್ರಿಗಳೆ, ನಾನು ಅದಕ್ಕಾಗಿಯೇ ಕುಡಿಯುವ ನೀರಿನ ವಿಚಾರದಲ್ಲಿ ಆಗಿರುವ ಸಮಸ್ಯೆ ಬಗ್ಗೆ ನಿಯಮ 60 ರಡಿಯಲ್ಲಿ ಚರ್ಚಿಸಲು ಅವಕಾಶ ಮಾಡಿಕೊಡಬೇಕೆಂದು ಕೇಳಿದ್ದೆ. ಆದುದರಿಂದ ನಿಯಮ 60 ರಡಿಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ವಿಷಯ ಬಹಳ ಗಂಭೀರವಾಗಿರುವುದರಿಂದ ಈ ನಿಯಮ 69 ರಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪಿಸಿದ ಎರಡೂ ವಿಷಯಗಳನ್ನು ಸೇರಿಸಿದ್ದೀರಿ?

ಅಧ್ಯಕ್ಷರು:- ಎರಡೂ ವಿಷಯಗಳನ್ನು ಸೇರಿಸಿಯೇ ನಿಯಮ 69 ರಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಈಗ ವಿರೋಧ ಪಕ್ಷದ ನಾಯಕರು ಮಾತನಾಡಬೇಕು.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಕರ್ನಾಟದಲ್ಲಿ ನಾವು ಹಿಂದೆಂದೂ ಕಾಣದಂತಹ ಬರಗಾಲವನ್ನು ಕಳೆದ ಎರಡು ವರ್ಷಗಳಲ್ಲಿ ನೋಡಿದ್ದೇವೆ. 2010 ಸೆಪ್ಟೆಂಬರ್ ತಿಂಗಳಿನಲ್ಲಿ ಬರಗಾಲ ಪ್ರಾರಂಭವಾಗಿ ಈಗಲೂ ಕೂಡ ನಾವು ಬರಗಾಲದ ಛಾಯೆಯಲ್ಲಿಯೇ ಇದ್ದೇವೆ. 2012 ರ ಮುಂಗಾರು ಹಿಂಗಾರು, 2011 ರ ಮುಂಗಾರು ಮತ್ತು ಹಿಂಗಾರು ಮಳೆಗಳು ಈ ಎರಡೂ ವರ್ಷಗಳಲ್ಲಿ

ಸರಿಯಾಗಿ ಬರದೇ ದೊಡ್ಡ ಹೊಡೆತವೇ ಬಿದ್ದಿದೆ. ನಿಮಗೆಲ್ಲರಿಗೂ ಗೊತ್ತಿರುವಂತೆ ರಾಜಸ್ಥಾನ ರಾಜ್ಯ ಬಿಟ್ಟರೆ ಕರ್ನಾಟಕ ರಾಜ್ಯದಲ್ಲಿಯೇ ಹೆಚ್ಚು ಒಣಪ್ರದೇಶವಿರತಕ್ಕಂಥದ್ದು. ಈ ಎರಡು ವರ್ಷಗಳಲ್ಲಿ ಮಳೆ ಬರಲಿಲ್ಲವೆಂದು ಹೇಳಿ ಹಂತ ಹಂತವಾಗಿ ಕರ್ನಾಟಕದಲ್ಲಿ 157 ತಾಲ್ಲೂಕುಗಳನ್ನು ಬರಗಾಲಪೀಡಿತ ಪ್ರದೇಶವೆಂದು ಸರ್ಕಾರವೇ ಘೋಷಣೆ ಮಾಡಿದೆ. ಮೊದಲು 123 ತಾಲ್ಲೂಕುಗಳಿತ್ತು. ಕೊನೆಯದಾಗಿ ಇನ್ನೂ 34 ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿದರು. ಕರ್ನಾಟದಲ್ಲಿ ಇರತಕ್ಕಂಥದ್ದೇ 176 ತಾಲ್ಲೂಕುಗಳು. 19 ತಾಲ್ಲೂಕುಗಳನ್ನು ಬಿಟ್ಟರೆ, ಅಂದರೆ 30 ಜಿಲ್ಲೆಗಳಲ್ಲಿ ಸುಮಾರು ಆರು ಜಿಲ್ಲೆಗಳನ್ನು ಬಿಟ್ಟರೆ ಉಳಿದ 24 ಜಿಲ್ಲೆಗಳಲ್ಲಿ ಬರಗಾಲ, 176 ತಾಲ್ಲೂಕುಗಳಲ್ಲಿ 157 ತಾಲ್ಲೂಕುಗಳು ಬರಗಾಲ ಪೀಡಿತ ಪ್ರದೇಶಗಳು. ಕೇವಲ 19 ತಾಲ್ಲೂಕುಗಳಲ್ಲಿ ಮಾತ್ರ ಬರಗಾಲವಿಲ್ಲ. ಒಂದೇ ಒಂದು ತಾಲ್ಲೂಕಿನಲ್ಲಿ ಮಾಮೂಲಿ ವಾಡಿಕೆ ಮಳೆಗಿಂತ ಹೆಚ್ಚು ಮಳೆಯಾಗಿರತಕ್ಕಂಥದ್ದು. ಸರ್ಕಾರವೇ ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಪ್ರಕಾರ 176 ತಾಲ್ಲೂಕುಗಳಲ್ಲಿ ಒಂದೇ ಒಂದು ತಾಲ್ಲೂಕಿನಲ್ಲಿ ಮಾಮೂಲಿ ಮಳೆಗಿಂತ ಹೆಚ್ಚು ಮಳೆಯಾಗಿರತಕ್ಕಂಥದ್ದು. 2012 ರಲ್ಲಿ ಮಳೆಯಾಗಿಲ್ಲ. ಇದರಿಂದಾಗಿ ಬಿತ್ತನೆಯನ್ನೂ ಕೂಡ ಮಾಡುವುದಕ್ಕಾಗಿಲ್ಲ. ಬಹುಶಃ 74.70 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ಮಾಡಬೇಕಾಗಿತ್ತು. ಆದರೆ ಕೇವಲ 62 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಯಿತು. ಮಳೆ ಬರದಿದ್ದ ಕಾರಣ ಸುಮಾರು 12 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯನ್ನೇ ಮಾಡುವುದಕ್ಕಾಗಲಿಲ್ಲ. ಇದರಿಂದಾಗಿ ಪ್ರೀ–ಮಾನ್ಸೂನ್‌ನಲ್ಲಿ ಹಾಕಿದಂಥ ಬೆಳೆ ಕೂಡ ನಷ್ಟವಾಯಿತು. ಒಟ್ಟಾರೆ ಬೆಳೆ ಎಲ್ಲವೂ ಹಾಳಾಗಿ ನಾಶವಾಗಿಹೋಯಿತು. ಇದರ ಜೊತೆಗೆ ಸುಮಾರು 16 ಲಕ್ಷ 21 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಯಿತು. ಬಹಳ ಆಶ್ಚರ್ಯಕರವಾದಂಥ ವಿಷಯವೆಂದರೆ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಮೊದಲನೆಯದಾಗಿ ಮುಂಗಾರಿನಲ್ಲಿ 74 ಲಕ್ಷ 70 ಸಾವಿರ ಹೆಕ್ಟೇರ್

ಪ್ರದೇಶದಲ್ಲಿ ಬಿತ್ತನೆ ಮಾಡಬೇಕೆಂದು ಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ಇದರಲ್ಲಿ ಕೇವಲ .62 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಯಿತು. ಅಂದರೆ ಸುಮಾರು 12 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯನ್ನೇ ಮಾಡಲಿಲ್ಲ. ಬಿತ್ತನೆ ಮಾಡಿರುವುದರಲ್ಲಿ ಕೂಡ 16.21 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ನಷ್ಟವಾಯಿತು. ಆದರೂ ನಾನು ನಿನ್ನೆ ಮಾನ್ಯ ರಾಜ್ಯಪಾಲರ ಭಾಷಣ ನೋಡಿದೆ. ಈ ವರ್ಷ ನಿಗದಿತ ಗುರಿ 125 ಲಕ್ಷ ಟನ್ ಆಹಾರ ಪದಾರ್ಥವನ್ನು ನಾವು ಉತ್ಪಾದನೆ ಮಾಡುತ್ತೇವೆಂದು ಕೊಟ್ಟಿದ್ದೀರಿ. ಇದು ಹೇಗೆ? ಮಾಯಾಮಂತ್ರ ಮಾಡುತ್ತಾರೋ ಏನೋ ನನಗೆ ಗೊತ್ತಿಲ್ಲ. 12 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯೇ ಆಗಿಲ್ಲ. 16 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಒಣಗಿಹೋಯಿತು. ಹಿಂಗಾರಿನಲ್ಲಿ 38 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಬೇಕೆಂದು ಗುರಿ ಇಟ್ಟುಕೊಂಡಿದ್ದು, 34 ಲಕ್ಷ ಹೆಕ್ಟೇರ್ ಮಾತ್ರ ನೀವು ಬಿತ್ತನೆ ಮಾಡಿರುವುದು. 4 ಲಕ್ಷ ಹೆಕ್ಟೇರ್‌ನಲ್ಲಿ ಪುನಃ ಅಲ್ಲಿ ಬಿತ್ತನೆ ಮಾಡಿಲ್ಲ. ಆದರೂ ಕೂಡ ನಾವು ನಮ್ಮ ಗುರಿಯನ್ನು ಈ ವರ್ಷ ತಲುಪುತ್ತೇವೆ ಎಂದರೆ ಕೃಷಿ ಮಂತ್ರಿಗಳೇ ನೀವೇನಾದರೂ ಮಾಯಮಂತ್ರ ಮಾಡಿದ್ದೀರಾ? As a matter fact, ತಾವು ಪ್ರತ್ಯೇಕವಾಗಿ ಕೃಷಿ ಬಜೆಟ್ ಮಂಡಿಸಿದ ಮೇಲೆ ಇಳುವರಿ ಪ್ರತಿವರ್ಷ ಕಡಿಮೆಯಾಗುತ್ತಿದೆ. ಇದು ಪ್ರಕೃತಿಯ ವಿಚಾರ ಇರಬಹುದು ಸರಿ, ನೀವು ಮಳೆ ಬೀಳಿಸುವುದಕ್ಕೆ ಆಗುವುದಿಲ್ಲ. ನಾನು ಕೇಳಿದ ಪ್ರಶ್ನೆಯನ್ನು ಮಾನ್ಯ ಬಚ್ಚೇಗೌಡರೇ ನೀವು ಕೇಳಿಸಿಕೊಳ್ಳಲಿಲ್ಲ. 74 ಲಕ್ಷ 70 ಸಾವಿರ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಬೇಕಾಗಿತ್ತು. ಅದರಲ್ಲಿ 62 ಲಕ್ಷ ಹೆಕ್ಟೇರ್ ಮಾತ್ರ ಬಿತ್ತನೆಯಾಗಿದ್ದು, ಇನ್ನು 16 ಲಕ್ಷ ಹೆಕ್ಟೇರ್ ಬೆಳೆ ಒಣಗಿ ಹೋಯಿತು. ಇದು ಮುಂಗಾರು ಒಳ್ಳೆಯ ವಿಚಾರವಾದರೆ, ಹಿಂಗಾರು ಮಳೆಯ ವಿಚಾರದಲ್ಲಿ ಹೇಳುವುದಾದರೆ 38 ಲಕ್ಷ ಹೆಕ್ಟೇರ್‌ನಲ್ಲಿ 34 ಲಕ್ಷ ಹೆಕ್ಟೇರ್ ಬಿತ್ತನೆಯಾಗಿ 4 ಲಕ್ಷ ಹೆಕ್ಟೇರ್ ಬೆಳೆ ಹೊರಟುಹೋಯಿತು. ಇಷ್ಟೆಲ್ಲ ಮಳೆ ಬರದೇ ಹೋದರೂ ಕೂಡ 125 ಲಕ್ಷ ಟನ್ ಆಹಾರ ಪದಾರ್ಥ ಬೆಳೆಯುತ್ತೇವೆಂದು ಏನು ಗುರಿ ಇಟ್ಟುಕೊಂಡಿದ್ದೀರಲ್ಲ, ಅದು ಬೆಳೆದು ಆಗಿಬಿಟ್ಟಿದೆ ಎಂದು ಹೇಳದ್ದಾರೆ.

ಇದು ಹೇಗೆ? ರಾಮನ ಲೆಕ್ಕವೇ ಕೃಷ್ಣನ ಲೆಕ್ಕವೆ? ಇದು ಸತ್ಯಕ್ಕೆ ದೂರವಾದುದು.

ಶ್ರೀ ಉಮೇಶ್ ವಿ. ಕತ್ತಿ:– ಮುಂಗಾರು ಮಳೆ ಪ್ರಾರಂಭವಾದಾಗ ವಿಶೇಷವಾಗಿ ಮೈಸೂರು ಭಾಗದಲ್ಲಿ ಬೇಗನೆ ಬಿತ್ತನೆಯಾಗುತ್ತದೆ.

ಶ್ರೀ ಸಿದ್ದರಾಮಯ್ಯ:– ನಾನು ಮೈಸೂರಿನವನೇ ಅಲ್ಲವೇ?

ಶ್ರೀ ಉಮೇಶ್ ವಿ. ಕತ್ತಿ:– ಏಪ್ರಿಲ್–ಮೇ ತಿಂಗಳಿನಲ್ಲಿ ಬಿತ್ತನೆಯಾಗಿ ಮಳೆಯಾಗದೆ ಬೆಳೆ ಒಣಗಿ ಹೋಗಿದ್ದು ನಿಜ. ಅದಾದ ಮೇಲೆ ಸರ್ಕಾರ ಎರಡನೇ ಬಾರಿಗೆ ಬಿತ್ತನೆ ಬೀಜವನ್ನು ಅದೇ ರೈತರಿಗೆ ಅದೇ ಸಬ್ಸಿಡಿ ಬೆಲೆಯಲ್ಲಿ ಕೊಟ್ಟು ಮತ್ತೆ ಬಿತ್ತನೆ ಮಾಡಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅದಲ್ಲದೆ ನಡುವೆ ಬಂದಂತಹ ನೀಲಂ ಮಳೆ ಏನಾಯಿತು, ಆ ಮಳೆ ಸಂದರ್ಭದಲ್ಲಿ ಇದ್ದಂತಹ ಬೆಳೆ ಚೆನ್ನಾಗಿ ಬಂದಿದೆ. ನಮ್ಮ ಗುರಿ 140 ಲಕ್ಷ ಟನ್ ಇದ್ದಿದ್ದು, ಇವತ್ತು 125 ಲಕ್ಷ ಟನ್ ಅಂದಾಜು ಮಾಡಲಾಗಿತ್ತು. ಹಿಂಗಾರಿನಲ್ಲಿ 38 ಲಕ್ಷ ಟನ್ ಬಿತ್ತನೆಯಾಗಬೇಕಾಗಿತ್ತು. 34 ಲಕ್ಷ ಟನ್ ಬಿತ್ತನೆಯಾಗಿದೆ. ಆ ಬೆಳೆಗಳು ಸ್ವಲ್ಪ ಚೆನ್ನಾಗಿ ಬಂದಿದೆ. ಅದಾದನಂತರ ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಮೇವಿನ ವ್ಯವಸ್ಥೆ ಕೂಡ ಸರಿಯಾಗಿದೆ. ಇವತ್ತಿಗೂ ಮೇವಿನ ವ್ಯವಸ್ಥೆ ಇದೆ. ತಾವು ಹೇಳಿದಂತೆ 157 ತಾಲ್ಲೂಕುಗಳಲ್ಲಿ ಬರಗಾಲವಾಗಿದ್ದು ನಿಜ. ಆದರೆ ಮಧ್ಯದಲ್ಲಿ ಬಂದಂತಹ ನೀಲಂ ಮಳೆ ಮತ್ತು ಮರಳಿ ಬಿತ್ತನೆಗೆ ಬೀಜ ಕೊಟ್ಟಂತಹ ಸಂದರ್ಭದಲ್ಲಿ ರೈತ ಬಿತ್ತನೆ ಮಾಡಿ ಬೆಳೆ ಬಂದಿರುವಂಥಾದ್ದೇ ಅಂದಾಜು 125 ಲಕ್ಷ ಟನ್ ಎಂದು ಮಾಡಲಾಗಿದೆ. Final figures ಬಂದಮೇಲೆ ತಮಗೆ ಅದರ ಮಾಹಿತಿಯನ್ನು ಕೊಡಲಾಗುತ್ತದೆ.

ಶ್ರೀ ಸಿದ್ದರಾಮಯ್ಯ:– ನೀವು ಅಂದಾಜು ಮಾಡಿ, ಅದರಂತೆ 125 ಲಕ್ಷ ಟನ್ ಆಹಾರ ಉತ್ಪಾದನೆಯಾದರೆ ಬಹಳ ಸಂತೋಷ. ಹೆಚ್ಚು ಆಹಾರ ಪದಾರ್ಥ ಉತ್ಪಾದನೆ ಆಗಬೇಕೆನ್ನುವುದು ನಮ್ಮ ಉದ್ದೇಶ ಕೂಡ ಆಗಿದೆ. ಆದರೆ ನೀವೇ ಕೊಟ್ಟಿರುವಂತಹ ಅಂಕಿ–ಅಂಶಗಳ ಪ್ರಕಾರ ಲೆಕ್ಕ ಹಾಕಿದರೆ, ನೀವು ಹೇಳುವುದು ಮೈಸೂರು, ಮಂಡ್ಯ ಮತ್ತು ಹಾಸನ

ಭಾಗದಲ್ಲಿ pre-monsoon ಎಂದು ಬರುತ್ತದೆ. ಆಗ ನಾವು ಮೊದಲೇ ಸೇಂಗಾ, ಜೋಳ ಮತ್ತು ರಾಗಿ ಈ ರೀತಿಯಲ್ಲಿ ಬಿತ್ತನೆ ಮಾಡಿರುತ್ತೇವೆ. ಅದು ಏನಾಯಿತೆಂದರೆ ಬೆಳೆ ಪೂರ್ತಿ ಹೊರಟುಹೋಯಿತು. ಅದು ಮನೆಗೆ ಒಂದು ಕಾಳು ಕೂಡ ಬರಲಿಲ್ಲ. ಒಣಗಿ ಹೋಯಿತು. ಏಕೆಂದರೆ ಏಪ್ರಿಲ್–ಮೇ ತಿಂಗಳಿನಲ್ಲಿ ಮಳೆ ಬಂತು. ನಂತರ ಜೂನ್–ಜುಲೈ ತಿಂಗಳಿನಲ್ಲಿ ಮಳೆ ಇಲ್ಲದ ಹಾಗಿ ಆಗಿಹೋಯಿತು. ಜೂನ್–ಜುಲೈ ತಿಂಗಳಿನಲ್ಲಿ ಮಳೆ ಹೊರಟು ಹೋದಮೇಲೆ pre-monsoon ನಲ್ಲಿ ಏನೇನು sowing ಆಗಿತ್ತು. ಅದೆಲ್ಲ ಸಂಪೂರ್ಣವಾಗಿ ಹಾಳಾಗಿ ಹೋಯಿತು. ಅದು ಹಾಳಾಗಿ ಹೋದಮೇಲೆ ಉತ್ಪನ್ನ ಏನಿರುತ್ತದೆ? ಇವರು ಏನು ಹೇಳುವುದೆಂದರೆ ಮತ್ತೆ ರೈತರಿಗೆ ಬೀಜ ಕೊಟ್ಟು, ಗೊಬ್ಬರ ಕೊಟ್ಟ ಮೇಲೆ ಅವರು ಪುನಃ ಬಿತ್ತನೆ ಮಾಡಿದರು ಎಂದು ಹೇಳಿದರು. ಅದನ್ನು ಹಾಕಬೇಕಾದರೆ ಹಿಂಗಾರಿನಲ್ಲಿ ಹಾಕಬೇಕು, ಅವರಿಗೆ ಮುಂಗಾರು ಹೊರಟು ಹೋಯಿತು. ಹಿಂಗಾರಿನಲ್ಲಿ ನೀವು ಕೇವಲ 34 ಲಕ್ಷ ಹೆಕ್ಟೇರ್ ಅಷ್ಟೇ ಹಾಕಿರುವುದು. ನೀವು 38 ಲಕ್ಷ ಹೆಕ್ಟೇರ್ ಗುರಿ ಇಟ್ಟುಕೊಂಡಿದ್ದೀರಿ, ಆದರೆ 34 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆ ಆಗಿದ್ದು, ಅಲ್ಲಿಯೂ ಕೂಡ 4 ಲಕ್ಷ ಹೆಕ್ಟೇರ್ ಕಡಿಮೆಯಾಯಿತು. ಅದರಲ್ಲೂ ಒಂದು ವೇಳೆ ನೀಲಂ ಮಳೆ ಬರದೇ ಹೋಗಿದ್ದರೆ ನಾವು ಎಷ್ಟು ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಿದ್ದೆವೋ ಹೇಳುವುದಕ್ಕೆ ಆಗುತ್ತಿರಲಿಲ್ಲ. ಇನ್ನು ಸ್ವಲ್ಪ ದಿನವಾದ ಮೇಲೆ ಅಕ್ಕಿ ರೇಟ್ 50 ರೂಪಾಯಿ ಆಗುತ್ತದೆ. ಆದರೆ ರೈತರಿಗೆ ಮಾತ್ರ ಏನೂ ಸಿಗುತ್ತಿಲ್ಲ. ಒಂದು ಕ್ವಿಂಟಾಲ್ ಭತ್ತಕ್ಕೆ ರೈತರಿಗೆ 1,500 ರೂಪಾಯಿ. ನೀವು ರೈತರಿಗೆ ಒಂದು ಕ್ವಿಂಟಾಲ್ ಭತ್ತಕ್ಕೆ ಒಂದೂವರೆ ಸಾವಿರ ರೂಪಾಯಿ ಕೊಡುತ್ತೀರಲ್ಲವೇ? ಈಗ ಅಕ್ಕಿ ರೇಟ್ ಎಷ್ಟಿದೆ? 42–43 ರೂಪಾಯಿ ಇದೆ. ಒಂದು ಕ್ವಿಂಟಾಲ್ ಭತ್ತಕ್ಕೆ 60 ಕೆ.ಜಿ. ಅಕ್ಕಿ ಬರುತ್ತದೆ. 1,500 ರೂಪಾಯಿ ದರದಲ್ಲಿ ರೈತರ ಹತ್ತಿರ ಭತ್ತವನ್ನು ತೆಗೆದುಕೊಂಡು ಅದರಲ್ಲಿ 60 ಕೆ.ಜಿ. ಅಕ್ಕಿ ಬಂದರೆ ಎಷ್ಟು ರೂಪಾಯಿ ಆಯಿತು? 2,500 ರೂಪಾಯಿ ಆಯಿತು. ಆದರೆ ರೈತರಿಗೆ 1,500 ರೂಪಾಯಿ ಸಿಗುವುದು,

ಮಧ್ಯದಲ್ಲಿ 1,000 ರೂಪಾಯಿ ಹೊಡೆಯುವವರು ಯಾರು? ವ್ಯಾಪಾರಸ್ಥರು. ಹಾಗಾದರೆ ನೀವು ಏನು ಮಾಡುತ್ತೀರಿ? ನೀವು ಎಂದರೆ ಸರ್ಕಾರ ಏನು ಮಾಡುತ್ತಿದ್ದೀರೆಂದು ಕೇಳಿದೆ.

ಶ್ರೀ ಉಮೇಶ್ ವಿ. ಕತ್ತಿ:– ರೈತರು ತಮ್ಮದೇ ಆದಂತಹ ಗೋಡೌನ್‌ನಲ್ಲಿ ಭತ್ತವನ್ನು stock ಮಾಡಿದ್ದಾರೆ. ಇದು sudden ಆಗಿ ವ್ಯಾಪಾರಸ್ಥರಿಗೆ ಹೊರಟು ಹೋಗುತ್ತದೆ ಎನ್ನುವ ಆಗಿಲ್ಲ. ವಿಶೇಷವಾಗಿ ಭತ್ತ ಬೆಳೆಯುವಂತಹ ಜಿಲ್ಲೆ ರಾಯಚೂರು ಜಿಲ್ಲೆ. ರಾಯಚೂರಿನಲ್ಲಿ ಭತ್ತವನ್ನು ರೈತರೇ stock ಮಾಡುತ್ತಾರೆ.

SRI SIDDARAMAIAH:- I can understand. The question is ರೈತರಿಗೆ ಸಿಗತಕ್ಕಂಥ ಮಧ್ಯದಲ್ಲಿ ಒಂದು ಟನ್‌ಗೆ ವ್ಯತ್ಯಾಸ ಒಂದು ಸಾವಿರ ರೂಪಾಯಿ ಇದೆ. You agree with me. ಒಂದು ಕ್ವಿಂಟಾಲ್ ಭತ್ತಕ್ಕೆ 60 ರಿಂದ 65 ಕೆ.ಜಿ ಅಕ್ಕಿ ಬರುತ್ತದೆ. ಅಲ್ಲವೇ? ಅಕ್ಕಿ ಒಂದು ಕೆ.ಜಿ. ಗೆ 40 ರಿಂದ 42 ರೂಪಾಯಿ ಎಂದರೂ ಕೂಡ 60 ಕೆ.ಜಿ ಅಕ್ಕಿಗೆ 2,500 ರೂಪಾಯಿ ಆಗುತ್ತದೆ. ಆದರೆ ರೈತರಿಗೆ ಭತ್ತಕ್ಕೆ ಸಿಗುವುದು 1,500 ರೂಪಾಯಿ. ಮಧ್ಯವರ್ತಿಗಳಿಗೆ 1,000 ರೂಪಾಯಿ ಸಿಗುತ್ತದೆ. Producer ಗೆ ಮತ್ತು consumer ಗೆ ಸಿಗುವ ಮಧ್ಯದಲ್ಲಿ ಎಷ್ಟು ವ್ಯತ್ಯಾಸ ಇದೆ ನೋಡಿ. ಈ ವ್ಯತ್ಯಾಸ ಏನಿದೆ, ಅದರಲ್ಲಿ ಇನ್ನು ಹೆಚ್ಚು ಕೊಡಬೇಕೆಂದು ರೈತರು ಕೇಳುತ್ತಿರುವುದು, ಅದನ್ನು ಕೊಡುತ್ತಿಲ್ಲ. ಭತ್ತ ಕೂಡ ಹೀಗೆ, ಕಬ್ಬೂ ಕೂಡ ಹೀಗೆ, ಯಾವುದೇ ಬೆಳೆ ರೈತ ಬೆಳೆದರೂ ತೆಗೆದುಕೊಳ್ಳಿ, ಇದೇ ರೀತಿಯಾಗುತ್ತದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ, ನನ್ನ ಉದ್ದೇಶ ಏನೆಂದರೆ, ಸರ್ಕಾರ ಇಷ್ಟು ಉತ್ಪಾದನೆ ಆಗುತ್ತದೆಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದಾರೆ. ನನ್ನ ಪ್ರಕಾರ 125 ಲಕ್ಷ ಟನ್ ಅಷ್ಟು ಉತ್ಪಾದನೆಯಾಗುವುದಕ್ಕೆ ಸಾಧ್ಯವೇ ಇಲ್ಲ. ಅದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳುವುದಕ್ಕೆ ಬಯಸುತ್ತೇನೆ. ಇದು ಬಿತ್ತನೆ ಆಗಿರುವಂಥಾದ್ದು, ಈ ಕಾರಣದಿಂದ ಮೇವೂ ಕೂಡ ಕಡಿಮಾಯಾಗಿದೆ. ಯಾವಾಗ ಮುಂಗಾರು ಬೆಳೆ ಹೋಯಿತು, ಆಗ

ಮೇವೂ ಕೂಡ ಕಡಿಮೆಯಾಗಿದೆ. ನಮಗೆ ಮುಖ್ಯವಾಗಿ ಮೇವು ಬರುವುದು ಯಾವುದರಿಂದವೆಂದರೆ ಭತ್ತದ ಹುಲ್ಲು, ಜೋಳ ಮತ್ತು ಸೇಂಗಾ ಬೆಳೆಯ ಮೇವು. ಸೇಂಗಾ ಬೆಳೆ ಹೋಯಿತು, ಜೋಳದ ಬೆಳೆ ಕೂಡ ಹೋಯಿತು ಈಗ ಬಿಜಾಪುರದ ಕಡೆ ನಿಮಗೆ ಹಿಂಗಾರಿನಲ್ಲಿ ಬಿಳಿ ಜೋಳ ಎಂದು ಬರುತ್ತದೆ ಅಲ್ಲ, ಅದು ಸ್ವಲ್ಪ ಬರುತ್ತದೆ ಅಷ್ಟೇ. ಈ ಸಾರಿ ಅದೂ ಇಲ್ಲ.

ಶ್ರೀ ವೆಂಕಟರಾವ್ ನಾಡಗೌಡ:– ಮಾನ್ಯ ಅಧ್ಯಕ್ಷರೆ, ಭತ್ತ ಕಟಾವು ಆದಮೇಲೆ ಬೇಕಾದಷ್ಟು ಮೇವು ಸಿಗುತ್ತದೆ. ಅದನ್ನು Pack ಮಾಡಿಕೊಳ್ಳುವುದಕ್ಕೆ ಒಂದು ಸಣ್ಣ machine ಇದೆ. ಅದನ್ನು ತೆಗೆದುಕೊಂಡು pack ಮಾಡಿಸಿದರೆ cotton bale ಆದ ಹಾಗೆ ಆಗುತ್ತದೆ. ಅದರ transportation ಬಹಳ easy. ಅದನ್ನು ಮಾಡಿಸಿ ಎಂದು ಹತ್ತು ಬಾರಿ ಹೇಳಿದರೂ ಯಾರೂ ನೋಡುವುದಿಲ್ಲ. ಈಗ ನಮ್ಮಲ್ಲಿ ಭತ್ತದ ಹುಲ್ಲನ್ನೆಲ್ಲ ಬೆಂಕಿ ಹಚ್ಚಿ ಸುಟ್ಟು ಬಿಡುತ್ತಾರೆ. ಅದನ್ನು pack ಮಾಡಿಕೊಂಡು ಎಲ್ಲಿಗೆ ಬೇಕಾದರೂ ಒಯ್ಯಬಹುದು. ಅದರ ಬಗ್ಗೆ ಮೂರ್ನಾಲ್ಕು ಬಾರಿ ಹೇಳಿದರೂ ಕೂಡ ಅದರ ಬಗ್ಗೆ ಯಾರೂ ಕೂಡ ಗಮನ ಹರಿಸುವುದಿಲ್ಲ. ಮೇವು ಇಲ್ಲವೆಂದಾಗ ರೈತರು ತಮಗೆ ಎಂದು ಏನು ಸಂಗ್ರಹಣೆ ಮಾಡಿಕೊಂಡಿರುತ್ತಾರೆ, ಅವರ ಹತ್ತಿರ ಹೋಗಿ ನಮಗೆ ಕೊಡಿ, ಅಲ್ಲಿ ಇಲ್ಲ, ನಾವು ಅಲ್ಲಿಗೆ ಕಳುಹಿಸಬೇಕೆಂದು ತಹಸೀಲ್ದಾರ್ ಹೋಗುತ್ತಾರೆ.

ಶ್ರೀ ವೆಂಕಟರಾವ್ ನಾಡಗೌಡ;– ಮುಂದು...

ಅದು ಇಲ್ಲವೆಂದಾಗ ರೈತರು ಮೇವನ್ನು ಏನು ಸಂಗ್ರಹಣೆ ಮಾಡಿಕೊಂಡಿರುತ್ತಾರೆ, ಅವರ ಹತ್ತಿರ ತಹಸೀಲ್ದಾರರು ಹೋಗಿ ಆ ಮೇವನ್ನು ಕೊಡಿ ಅಲ್ಲಿ ಇಲ್ಲ ಕಳುಹಿಸಿಕೊಡಬೇಕೆಂದು ಕೇಳುತ್ತಾರೆ.

SRI SIDDARAMAIAH:- ಹಾಗೆ ನೋಡಿದರೆ Government is thick skinned, irresponsible.

ಶ್ರೀ ವೆಂಕಟರಾವ್ ನಾಡಗೌಡ:– ನಾನು ಅದನ್ನೇ ಹೇಳುತ್ತಿದ್ದೇನೆ. ನಾವು ಹೇಳಿದರೂ ಕೂಡ ಯಾವ ಅಧಿಕಾರಿಗಳು ಅರ್ಥ ಮಾಡಿಕೊಳ್ಳುತ್ತಿಲ್ಲ.

SRI SIDDARAMAIAH:- Government is thick skinned, ಆದರೆ ಹೀಗೆ ಆಗುವುದು, irresponsible ಆದರೆ ಹೀಗೆ ಆಗುವುದು. ಇವತ್ತು ಜಾನುವಾರುಗಳಿಗೆ ಮೇವು ಸಿಗುತ್ತಿಲ್ಲ, ಮುಂಗಾರು ಕಷ್ಟವಾಯಿತೆಂದು ಗೋಶಾಲೆಗಳನ್ನು ಮಾಡಬೇಕೆಂದು ಹೇಳಿದ್ದೆವು. ಕರ್ನಾಟಕ ರಾಜ್ಯದಲ್ಲಿ ಜಾನುವಾರುಗಳು ದನ–ಎಮ್ಮೆ ಇವುಗಳು ಸುಮಾರು ಒಂದು ಕೋಟಿ ನಲವತ್ತು ಲಕ್ಷ ಮೇವಿನ ಮೇಲೆ ಅವಲಂಬನೆಯಾಗಿರುವಂಥದ್ದು, ಇನ್ನು ಮೇಕೆಗಳು, ಕುರಿಗಳು ಸುಮಾರು ಒಂದು ಕೋಟಿ ಅರವತ್ತು ಲಕ್ಷ ಇವೆ. ಇವುಗಳಿಗೆ ನೀರು, ಮೇವನ್ನು ಕೊಡಬೇಕು. ಇವುಗಳಿಗೆ ಮೇವಿಲ್ಲವೆಂದು ಗೋಶಾಲೆಗಳನ್ನು ತೆಗೆದಿದ್ದೀರಿ. ಆ ಗೋಶಾಲೆಗಳಲ್ಲಿ ಕುರಿಗಳಿಗೆ, ಮೇಕೆಗಳಿಗೆ ಮೇವು ಕೊಡಲೇ ಇಲ್ಲ. ರಾಜ್ಯದಲ್ಲಿ ಮಳೆ ಇಲ್ಲ, ಗಿಡಗಳು ಹಸಿರು ಇಲ್ಲ, ನೆಲದಲ್ಲಿ ಹುಲ್ಲು ಇಲ್ಲ. ಮಾನ್ಯ ಮಂತ್ರಿಯವರೆ, ಈ ರೀತಿ ಇದ್ದಾಗ ಕುರಿಗಳು, ಮೇಕೆಗಳು ಹೇಗೆ ಬದುಕಬೇಕು? ಇವುಗಳಿಗೆ ತಾವು ಮೇವನ್ನು ಶೇಖರಣೆ ಮಾಡಲಿಲ್ಲ, ಮೇವು ಕೊಡಲಿಲ್ಲ, ಹೀಗಾಗಿ ಅನೇಕ ಕುರಿಗಳು, ಮೇಕೆಗಳು ರೋಗ ಬಂದು, ಮೇವು ಇಲ್ಲದೇ ಸತ್ತವು.

ಶ್ರೀ ರೇವುನಾಯಕ್ ಬೆಳಮಗಿ:– ಮಾನ್ಯ ಅಧ್ಯಕ್ಷರೆ, ಕುರಿಗಳು, ಮೇಕೆಗಳು 'ಧನಲಕ್ಷ್ಮಿಯಂತೆ' ಇವುಗಳಿಗೆ ಭಗವಂತನೇ ನೀರು, ಮೇವನ್ನು ಕೊಡುತ್ತಾನೆ. ಇವುಗಳು ಗಿಡಗಳನ್ನು ತಿನ್ನುತ್ತವೆ, ಭಗವಂತನು ಕೊಡುವ ನೀರನ್ನು ಕುಡಿಯುತ್ತವೆ. ಹಸುವಿಗೆ ಮಾತ್ರ ಮೇವು ಬೇಕು, ನಾನು ಕುರಿಗಳನ್ನು, ಎಮ್ಮೆಗಳನ್ನು, ಹಸುಗಳನ್ನು ಕಾಯ್ದಿದ್ದೇನೆ.

ಶ್ರೀ ಸಿದ್ದರಾಮಯ್ಯ:– ಈಗ ಒಂದು ಕೆಲಸ ಮಾಡೋಣ, ತಾವು ಊಟ ಮಾಡಬೇಡಿ, ಭಗವಂತನ ಹೆಸರನ್ನು ಹೇಳಿಕೊಂಡು ಇದ್ದು ಬಿಡಿ. ತಾವು ಏಕೆ ನೀರು ಕುಡಿಯಬೇಕು? ಊಟ ಮಾಡಬೇಕು? ತಾವು ಭಗವಂತನ ಹೆಸರನ್ನು ಹೇಳಿಕೊಂಡು ಕುಳಿತು ಬಿಡಿ, ಆ ರೀತಿ ಆಗುತ್ತದೆಯೇ? ನಮ್ಮ ಹಳ್ಳಿಗಳಲ್ಲಿ ಭಗವಂತನೆ ನೋಡಿಕೊಳ್ಳುತ್ತಾನೆಂದು

ಹೇಳುತ್ತಾರೆ, ಹಾಗೆ ಕುರಿಗಳನ್ನು, ಮೇಕೆಗಳನ್ನು ಭಗವಂತನೆ ನೋಡಿಕೊಳ್ಳುತ್ತಾನೆ.

ಡಾ.ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ಹಳ್ಳಿಗಳಲ್ಲಿ "ಹುಟ್ಟಿಸಿದ ಶಿವ ಹುಲ್ಲು, ನೀರು ಕೊಡದೇ ಇರುತ್ತಾನೆ? ಎಂಬ ಗಾದೆ ಮಾತು ಇದೆ.

ಶ್ರೀ ಸಿದ್ದರಾಮಯ್ಯ:– ಆ ರೀತಿ ಹಳ್ಳಿಗಳಲ್ಲಿ ಗಾದೆ ಇದೆ ನಿಮ್ಮ ಕಡೆಯೂ ಇದೆಯೇ? "ಹುಟ್ಟಿಸಿದ ಶಿವ ಹುಲ್ಲು, ನೀರು ಕೊಡದೇ ಹೋಗುತ್ತಾನೆ?" ಎಂದು ಗಾದೆ ಇದೆ. ತಾವು ಇದರ ಮೇಲೆ ನಂಬಿಕೆ ಇಟ್ಟುಕೊಂಡಿದ್ದೀರಾ? ಮಾನ್ಯ ಅಧ್ಯಕ್ಷರೆ, ನಾವು ಇಂಥವರೊಂದಿಗೆ ಏನು ಚರ್ಚೆ ಮಾಡುವುದು?

ಶ್ರೀ ರೇವುನಾಯಕ್ ಬೆಳಮಗಿ:– ಮಾನ್ಯ ಅಧ್ಯಕ್ಷರೆ, ದನಗಳು, ಮೇಕೆ, ಕುರಿಗಳು ಮೇವು ಇಲ್ಲದೇ ಒಂದೂ ಸತ್ತಿಲ್ಲ, ಜ್ವರ ಬಂದು ಸತ್ತಿರಬಹುದು.

ಶ್ರೀ ಸಿದ್ದರಾಮಯ್ಯ:– ತಾವು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ? ತಾವು ಮಾಹಿತಿಯನ್ನು ಉತ್ತರ ಕೊಡುವಾಗ ಕೊಡುತ್ತೀರಾ? ನನಗೆ ತಿಳಿದ ಮಟ್ಟಿಗೆ ಮೇವು ಇಲ್ಲದೇ ಸಾವಿರಾರು ಕುರಿಗಳು ಸತ್ತಿವೆ.

ಶ್ರೀ ರೇವುನಾಯಕ್ ಬೆಳಮಗಿ:– ಜ್ವರದಿಂದ ಸತ್ತಿರಬಹುದು.

ಶ್ರೀ ಸಿದ್ದರಾಮಯ್ಯ:– ನನ್ನ ಬಳಿ ಇರುವ ಮಾಹಿತಿಯನ್ನು ಹೇಳುತ್ತಿದ್ದೇನೆ. ನನಗೆ ಕುರಿ ಸಾಕುವವರೆಲ್ಲಾ ಚೆನ್ನಾಗಿ ಪರಿಚಯವಿದ್ದಾರೆ. ತಮ್ಮ ಬಳಿಗೆ ಕುರಿ ಇರುವವರು ಬರುತ್ತಾರಾ? ಇಲ್ಲ, ತಮ್ಮ ಬಳಿಗೆ ಕುರಿ ಇರುವವರು ಬರುವುದಿಲ್ಲ, ಏಕೆಂದರೆ, ನಿಮ್ಮನ್ನು ಕಂಡರೆ ಕುರಿಗಳು ಹೆದರಿಕೊಳ್ಳುತ್ತವೆ, ಅವು ನಿಮ್ಮ ಬಳಿ ಎಲ್ಲಿ ಬರುತ್ತವೆ? ನಾನು ಈ ವಿಷಯವನ್ನು ಇಲ್ಲಿ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಒಮ್ಮೆ ಇಲ್ಲಿ ನಾನು ಪ್ರಸ್ತಾಪ ಮಾಡಿದ್ದೆ. ಆಗ ಮೇವನ್ನು ದನ–ಕರುಗಳಿಗೂ ಕೊಡಬೇಕು, ಅದೇ ರೀತಿಯಲ್ಲಿ ಕುರಿ–ಮೇಕೆಗಳಿಗೂ ಮೇವು ಕೊಡಬೇಕಾಗುತ್ತದೆ, ನೀರು

ಕೊಡಬೇಕಾಗುತ್ತದೆ. ಏಕೆಂದರೆ, ಕಾಡುಗಳಲ್ಲಿ, ಜಮೀನುಗಳಲ್ಲಿ ಮೇವು ಇದ್ದರೆ ಕುರಿ ಮೇಯಿಸುವುದಕ್ಕೆ ಜಾಗಗಳಿದ್ದರೆ ಅಲ್ಲಿ ತಾವು ಮೇವು ಬೆಳೆಸಿದ್ದರೆ ಬೇಕಾಗುವುದಿಲ್ಲ. ತಾವು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಕೆರೆ-ಕಟ್ಟೆಗಳಲ್ಲಿ ನೀರು ಇದ್ದರೆ ಒಪ್ಪಿಕೊಳ್ಳೋಣ. ಮಾನ್ಯ ಮಂತ್ರಿಯವರೆ, ಈಗ ಕೆರೆಗಳೆಲ್ಲಾ ಬತ್ತಿ ಹೋಗಿದೆಯಲ್ಲಾ, ಕರ್ನಾಟಕ ರಾಜ್ಯದಲ್ಲಿ ಎಷ್ಟು ಕೆರೆಗಳಿವೆ ಎಂದು ಹೇಳಿ? 3,524 ಕೆರೆಗಳಿದ್ದು, ಈ ಕೆರೆಗಳು ತುಂಬಿರುವಂಥದ್ದೆ ಬಹಳ ಕಡಿಮೆ. 10% of the tanks ತುಂಬಿತ್ತು, ಇನ್ನು 90% ಕೆರೆಗಳಲ್ಲಿ, ಕೆಲವು ಕೆರೆಗಳಲ್ಲಿ 30%, 40% ನೀರು ಇತ್ತು. ಸುಮಾರು 2,500 ಕೆರೆಗಳು ಒಣಗಿ ಹೋಗಿದೆ. Out of 3,524 tanks – minor, medium irrigation tank ಗಳಲ್ಲಿ 10% ಕೆರೆಗಳು ಮಾತ್ರ ತುಂಬಿತ್ತು. ಇನ್ನು ಉಳಿದ ಕೆರೆಗಳಲ್ಲಿ 20% ಕೆರೆಗಳು, 30%, 40%, 50% ನೀರು ಇತ್ತು. ಇನ್ನು ಉಳಿದ more than 70% ಕೆರೆಗಳಲ್ಲಿ ಒಂದು ಹನಿ ನೀರೂ ಇಲ್ಲ. ಈ ರೀತಿ ಇದ್ದಾಗ ಪ್ರಾಣಿಗಳು ನೀರು ಎಲ್ಲಿ ಕುಡಿಯುತ್ತವೆ? ದನ-ಕರುಗಳಿಗೆ ನೀರು ಎಲ್ಲಿ ಸಿಗುತ್ತದೆ? ಒಂದು ಕೋಟಿ ನಲವತ್ತು ಲಕ್ಷ ರಾಸುಗಳಿಗೆ ಗೋಶಾಲೆಗಳನ್ನು ಎಷ್ಟು ಮಾಡಿದ್ದೀರಿ? 2011ರ ಅಕ್ಟೋಬರ್ ತಿಂಗಳಲ್ಲಿ 15 ಗೋಶಾಲೆಗಳನ್ನು ಮಾಡಿದ್ದೀರಿ, ನವೆಂಬರ್‌ನಲ್ಲಿ 12 ಗೋಶಾಲೆಗಳನ್ನು ಮಾಡಿದ್ದೀರಿ, ಡಿಸೆಂಬರ್ ತಿಂಗಳಲ್ಲಿ 13 ಗೋಶಾಲೆಗಳನ್ನು ಮಾಡಿದ್ದೀರಿ, ಜನವರಿಯಲ್ಲಿ 31, ಫೆಬ್ರವರಿಯಲ್ಲಿ 25, ಮಾರ್ಚ್ 44, ಏಪ್ರಿಲ್‌ನಲ್ಲಿ 55, ಮೇ ತಿಂಗಳಲ್ಲಿ 71, ಜೂನ್‌ನಲ್ಲಿ 76, ಜುಲೈನಲ್ಲಿ 114, ಅಗಸ್ಟ್‌ನಲ್ಲಿ 193, ಸೆಪ್ಟೆಂಬರ್ 145, ಅಕ್ಟೋಬರ್‌ನಲ್ಲಿ 61, ನವೆಂಬರ್‌ನಲ್ಲಿ 35, ಡಿಸೆಂಬರ್‌ನಲ್ಲಿ 04, ಜನವರಿಯಲ್ಲಿ 05, ಗೋಶಾಲೆಗಳು ಇವೆ. ರಾಜ್ಯದಲ್ಲಿ ಸ್ವಲ್ಪ ಮಳೆ ಬಿದ್ದ ತಕ್ಷಣವೇ ಎಲ್ಲಾ ಗೋಶಾಲೆಗಳನ್ನು ಮುಚ್ಚಿದ್ದೀರಿ. ಇವುಗಳಿಗೆ ಮೇವು ಎಲ್ಲಿದೆ? ನಾವು ಕಳೆದ ಸಭೆಯಲ್ಲಿ ಕನಿಷ್ಟಪಕ್ಷ ಒಂದು ಹೋಬಳಿಗೆ ಗೋಶಾಲೆಗಳನ್ನು ಮಾಡಿ ಎಂದು ಇಲ್ಲಿ ಹೇಳಿದೆವು. ಇವುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಕೊಡಿ, ಮೇವನ್ನು ಶೇಖರಣೆ ಮಾಡಿ ಇಟ್ಟುಕೊಳ್ಳಿ ಎಂದು ಹೇಳಿದ್ದೆವು. ಒಂದು

ರಾಸಿಗೆ ಕನಿಷ್ಟ 8 ಕೆ.ಜಿ ಮೇವನ್ನು ಕೊಡಿ, ಇಂಡಿ ಕೊಡಿ ಎಂದು ಹೇಳಿದ್ದೆವು. ಆ ರೀತಿ ಕೊಟ್ಟಿದ್ದೀರಾ? ಆ ರೀತಿ ಕೊಡಲಿಲ್ಲ. ಗೋಶಾಲೆಗಳನ್ನು ಮಾಡಿ, ಈಗ ಅದೆಲ್ಲವನ್ನು ಮುಚ್ಚಿ ಬಿಟ್ಟಿದ್ದಾರೆ. ಇವತ್ತು ಇಡೀ ರಾಜ್ಯದಲ್ಲಿ ಡಿಸೆಂಬರ್‌ನಲ್ಲಿ 04 ಗೋಶಾಲೆಗಳನ್ನು ಮತ್ತು ನನ್ನ constituency ಯಲ್ಲಿ ಒಂದು ಗೋಶಾಲೆಯನ್ನು ತೆಗೆದಿದ್ದು ಸೇರಿ 5 ಗೋಶಾಲೆಗಳು ಇವೆ. ತಾವು 5 ಗೋಶಾಲೆಗಳನ್ನು ಮಾಡಿ ಒಂದು ಕೋಟಿ ನವಬತ್ತು ಲಕ್ಷ ರಾಸುಗಳನ್ನು ರಕ್ಷಣೆ ಮಾಡುವುದು. ಈ 5 ಗೋಶಾಲೆಗಳಲ್ಲಿ 3,000 ರಾಸುಗಳಿವೆ, ಇನ್ನು ಉಳಿದಿರುವಂಥದ್ದಕ್ಕೆ ಮೇವು ಬೇಡವೇ? ಕುಡಿಯುವುದಕ್ಕೆ ನೀರು ಬೇಡವೇ? ಬಿಜಾಪುರ, ಬಾಗಲಕೋಟೆ ಕಡೆಗಳಲ್ಲಿ ಗೋಶಾಲೆಗಳು ಇಲ್ಲ, ಎಲ್ಲವನ್ನು ಮುಚ್ಚಿ ಬಿಟ್ಟಿದ್ದಾರೆ. ಚಾಮರಾಜನಗರ ಬಹಳ worst hit district, ಇಲ್ಲಿ ಒಂದು ಗೋಶಾಲೆ ಇಲ್ಲ, ಎಲ್ಲವನ್ನು ಮುಚ್ಚಿ ಬಿಟ್ಟಿದ್ದಾರೆ, ಮಂಡ್ಯ ಜಿಲ್ಲೆಯಲ್ಲೂ ಒಂದು ಗೋಶಾಲೆ ಇಲ್ಲ. ಕಳೆದ ವರ್ಷ ಮೇವು purchase ಮಾಡಿದ್ದು, ಅದರ ಹಣವನ್ನು ಕೊಟ್ಟಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ:– ಮಾನ್ಯ ಅಧ್ಯಕ್ಷರೆ, ಎಲ್ಲಾ ಜಿಲ್ಲೆಗಳಲ್ಲೂ ಜಿಲ್ಲಾಧಿಕಾರಿಗಳು review ಮಾಡಿ ಹಣವನ್ನು ಕೊಟ್ಟೇ ಕೊಡುತ್ತಾರೆ. ಅವರ ಹತ್ತಿರ ಹಣ ಇದೆ.

ಶ್ರೀ ಬಿ.ಎನ್. ಬಚ್ಚೇಗೌಡ:– ತಾವು ಚಾಮರಾಜನಗರವನ್ನು quote ಮಾಡಿ ಹೇಳಿದಿರಿ ಅದಕ್ಕಾಗಿ ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ:– ಬಚ್ಚೇಗೌಡರೇ, ಇದು ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಕೊಟ್ಟಿರುವ ಅಂಕಿಅಂಶಗಳು.

SRI B.N. BACHE GOWDA:- There is money. ಹಣ ಇಲ್ಲದೇ ಇಲ್ಲ.

ಶ್ರೀ ಬಂಡೆಪ್ಪ ಕಾಶೆಂಪೂರ್:– ಹೋದ ವರ್ಷ ಮೇವಿಗೆ ಸಬ್ಸಿಡಿ ಕೊಡುತ್ತೇವೆ ಎಂದು ಸದಾನಂದಗೌಡರು ಮುಖ್ಯಮಂತ್ರಿಯಾಗಿದ್ದಾಗಲೇ ಅನೌನ್ಸ್ ಮಾಡಿದರು. ಇದುವರೆಗೆ ಆ ಸಬ್ಸಿಡಿ ರಿಲೀಸ್ ಆಗಿಲ್ಲ.

ಸರ್ಕಾರವೇ ಹೇಳಿದ ಮೇಲೆ ಅದು ಏಕೆ ಕಾರ್ಯರೂಪಕ್ಕೆ ಬರುತ್ತಿಲ್ಲ ಎನ್ನುವುದು ಗೊತ್ತಾಗುತ್ತಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ:– CRF ನಲ್ಲಿ ನಮ್ಮ ನಮ್ಮ ಜಿಲ್ಲೆಗಳಲ್ಲಿ ಜಿಲ್ಲೆಗೆ ಇಷ್ಟೆಂದು ಹೇಳಿ ಅವರೇ ಕೊಡುತ್ತಾರೆ. ವಾಟರ್‌ಗೆ ಟ್ಯಾಂಕರ್ಸ್ ಕೊಡುತ್ತಾರೆ, ಮೇವಿಗೆ ಹಣ ಕೊಡುತ್ತಾರೆ, ಗೋಶಾಲೆಗಳನ್ನು ತೆರೆಯುತ್ತಾರೆ. We are spending every month. We are reviewing every week. There is money.

ಶ್ರೀ ಎನ್. ಸಂಪಂಗಿ:– ಮಂತ್ರಿಗಳು ಇರುವಂಥ ಜಾಗದಲ್ಲಿ ಪಾವತಿಯಾಗಿದೆ. ಎಲ್ಲೆಲ್ಲಿ ಮಂತ್ರಿಗಳಿಲ್ಲವೋ ಅಲ್ಲಿ ಪಾವತಿಯಾಗಿಲ್ಲ.

ಶ್ರೀ ವೆಂಕಟರಮಣಪ್ಪ:– ಹೋದ ವರ್ಷದ ದುಡ್ಡನ್ನು ಇವತ್ತಿನವರೆಗೆ ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಮಾಹಿತಿ ಪಡೆದುಕೊಂಡೇ ಹೇಳುತ್ತಿದ್ದೇನೆ. Bachegowda didn't follow me. ನಾನು ಏನು ಹೇಳಿದೆ ಎಂದರೆ, ಇವತ್ತು ರಾಜ್ಯದಲ್ಲಿ ಬರೀ ಐದು ಗೋಶಾಲೆಗಳಿವೆ. ಈ ಐದು ಗೋಶಾಲೆಗಳಲ್ಲಿ ಮೂರು ಸಾವಿರ ರಾಸುಗಳಿವೆ. ನಮ್ಮಲ್ಲಿ ದನಕರು, ಎಮ್ಮೆಗಳು ಸೇರಿದಂತೆ ಒಟ್ಟು ಸುಮಾರು ಒಂದು ಕೋಟಿ ನಲವತ್ತು ಲಕ್ಷ ರಾಸುಗಳಿವೆ. ಈ ಐದು ಕಡೆಗಳಲ್ಲಿ ಮಾತ್ರ ಗೋಶಾಲೆಗಳ ಅಗತ್ಯವಿದೆಯೇ? ಇನ್ನು ಬೇರೆ ಕಡೆಗಳಲ್ಲಿ ಅಗತ್ಯವಿಲ್ಲವೇ? ಬೇರೆ ಎಲ್ಲ ಕಡೆಗಳಲ್ಲಿ ಮುಚ್ಚಿಬಿಟ್ಟಿದ್ದಾರೆ. ಚಾಮರಾಜನಗರದಲ್ಲಿ ದನಕರುಗಳಿಗೆ ಮೇವಿಲ್ಲ, ಕುಡಿಯುವುದಕ್ಕೆ ನೀರಿಲ್ಲ. ನಾನು ಚಾಮರಾಜನಗರಕ್ಕೆ ಹೋಗಿ ಬಂದಿದ್ದೇನೆ. ರೆವಿನ್ಯೂ ಮಂತ್ರಿಗಳು ಈಗ ಇಲ್ಲಿದ್ದಾರೆ. ಅವರ ಗಮನಕ್ಕೆ ತರುತ್ತಿದ್ದೇನೆ. ನಾನು ಮೈಸೂರು ಜಿಲ್ಲೆಯ ಡಿ.ಸಿ.ಯವರಿಂದ ಮಾಹಿತಿ ತರಿಸಿದ್ದೇನೆ. ನಿಮ್ಮ ಡಿ.ಸಿ.ಯವರೇ ಉತ್ತರವನ್ನು ಕಳುಹಿಸಿ ಕೊಟ್ಟಿದ್ದಾರೆ. ನಮಗೆ 183 ಲಕ್ಷದ 48 ಸಾವಿರ ಅನುದಾನವಿದ್ದು, ಪ್ರಸ್ತುತ ಮೈಸೂರು ಹಾಗೂ ನಂಜನಗೂಡು ತಾಲ್ಲೂಕುಗಳಲ್ಲಿ ತಾಲ್ಲೂಕಿಗೆ ಎರಡರಂತೆ ಒಟ್ಟು ನಾಲ್ಕು ಗೋಶಾಲೆಗಳನ್ನು

ತೆರೆಯಲು ಅನುಮತಿ ನೀಡಲಾಗಿದ್ದು, ಪ್ರತಿ ಗೋಶಾಲೆಗೆ 43 ಲಕ್ಷ 45 ಸಾವಿರ ಖರ್ಚಾದರೆ ನಾಲ್ಕು ಗೋಶಾಲೆಗಳಿಗೆ 173 ಲಕ್ಷ 80 ಸಾವಿರ ಬೇಕಾಗುತ್ತದೆ. ಇದನ್ನು ಕೊಟ್ಟರೆ ನಮ್ಮ ಹತ್ತಿರ ಉಳಿಯುವುದೇ 9 ಲಕ್ಷ ಎಂದು ಡಿ.ಸಿ.ಯವರು ಉತ್ತರ ಕೊಡುತ್ತಾರೆ. ರಾಜ್ಯದಲ್ಲಿರುವಂಥ ಐದು ಗೋಶಾಲೆಗಳಲ್ಲಿ ನಾಲ್ಕು ಗೋಶಾಲೆಗಳು ಮೈಸೂರು ಜಿಲ್ಲೆಯಲ್ಲಿವೆ. ಡಿ.ಸಿ.ಯವರ ಹತ್ತಿರ ಬರೀ 9 ಲಕ್ಷವಿರುತ್ತದೆ. ನಮ್ಮ ಹತ್ತಿರ CRF ದುಡ್ಡು, ಆ ದುಡ್ಡು ಈ ದುಡ್ಡು ಎಂದು ಬಹಳ ದುಡ್ಡಿದೆ ಎಂದು ಹೇಳಿದಿರಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ:– ನಿಮ್ಮ ಜಿಲ್ಲೆಯದು ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಇದೆ ಎಂದು ಹೇಳಿದೆ.

ಶ್ರೀ ಸಿದ್ದರಾಮಯ್ಯ:– ನಾನು ನಮ್ಮ ಜಿಲ್ಲೆಯದನ್ನು ಹೇಳುತ್ತಿದ್ದೇನೆ, ನನಗೆ ಗೊತ್ತಿರುವುದನ್ನೇ ಹೇಳುತ್ತಿದ್ದೇನೆ. ಈ ಉತ್ತರವನ್ನು ನಾನು ನಿನ್ನೆ ಮೈಸೂರು ಡಿ.ಸಿ.ಯವರಿಂದ ತರಿಸಿಕೊಂಡಿರುವುದು. ಅವರಲ್ಲಿ ಬರೀ 9 ಲಕ್ಷವಿದೆ. ಕುಡಿಯುವ ನೀರಿಗೆ ಎಲ್ಲಿದೆ ಸ್ವಾಮಿ ದುಡ್ಡು? ಕುಡಿಯುವ ನೀರಿಗೆ ದುಡ್ಡು ಕೊಡಿ ಎಂದರೆ ಡಿ.ಸಿ.ಯವರು ಎಲ್ಲಿಂದ ದುಡ್ಡು ಕೊಡುತ್ತಾರೆ? ಕಳೆದ ನವೆಂಬರ್‌ನಲ್ಲಿ ಬೆಳಗಾವಿಯಲ್ಲಿ ಅಧಿವೇಶನ ನಡೆದಾಗ, ಕುಡಿಯುವ ನೀರಿಗೆ ಒಂದೊಂದು ಕೋಟಿ ಕೊಡಿ ಎಂದು ನಾವು ಹೇಳಿದ್ದೆವು. ಇವತ್ತಿನವರೆಗೆ ಕೊಡಲಿಲ್ಲ. ಈಗ ಒಂದೊಂದು ತಾಲ್ಲೂಕಿಗೆ 30 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ಮಾಹಿತಿ ನನಗೆ ಬಂದಿದೆ. ಅದಕ್ಕೆ ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಯಾವ ರೀತಿ ಕೊಟ್ಟಿದ್ದಾರೆ ಎಂದರೆ, ಅದನ್ನು ಯಾರೂ ಕುಡಿಯುವ ನೀರಿಗೆ ಖರ್ಚು ಮಾಡುವುದಕ್ಕೇ ಬರುವುದಿಲ್ಲ, ಆ ರೀತಿ ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ದಿನಾಂಕ 30.01.2013 ರ ಸರ್ಕಾರದ ಆದೇಶದಲ್ಲಿ, ಪ್ರತಿ ತಾಲ್ಲೂಕಿನಲ್ಲಿ 30 ಲಕ್ಷದಂತೆ ಒಟ್ಟು 210 ಲಕ್ಷ ಅನುದಾನವನ್ನು, ಟ್ಯಾಂಕರುಗಳ ಮೂಲಕ ನೀರು ಕೊಡಿ ಎಂದು ಕೊಟ್ಟಿದ್ದಾರೆ, ಇದು ಮೊದಲನೆಯದು. ಎರಡನೆಯದಾಗಿ, ಗೋಶಾಲೆಗಳಲ್ಲಿ ಜಾನುವಾರುಗಳಿಗೆ ಮೇವು ಪೂರೈಕೆಗೆ ಕೊಡಿ ಎಂದು ಹೇಳಿದ್ದಾರೆ. ನೀವು ಮನುಷ್ಯರಿಗೆ ನೀರು ಕೊಡಬೇಡಿ. ಎಲ್ಲಿ ಕುಡಿಯುವ

ನೀರಿನ ತೀವ್ರ ಅಭಾವವಿದೆ, ಯಾವ ಸೋರ್ಸ್‌ನಿಂದಲೂ ನೀರು ಸಿಗದೇ ಇರುವಂಥ ಹಳ್ಳಿಗಳಿಗೆ ಟ್ಯಾಂಕರುಗಳ ಮೂಲಕ ನೀರು ಕೊಡಲಾಗುತ್ತದೆ. ಅದಕ್ಕೆ ಖರ್ಚು ಮಾಡಿ ಮತ್ತು ಗೋಶಾಲೆಗಳಲ್ಲಿ ಜಾನುವಾರುಗಳಿಗೆ ಮೇವು ಪೂರೈಕೆಗೆ ಮಾತ್ರ ವೆಚ್ಚ ಮಾಡಲು ಬಿಡುಗಡೆಯಾಗಿರುತ್ತದೆ ಎಂದು ಇದೆ. ಮಾನ್ಯ ಮುಖ್ಯಮಂತ್ರಿಗಳೇ ನೀವು ಹಣಕಾಸಿನ ಮಂತ್ರಿಯಾಗಿರುವುದರಿಂದ ಇದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ನೀವು ಈ ರೀತಿ ಕಂಡೀಷನ್‌ಗಳನ್ನು ಹಾಕಿ ದುಡ್ಡು ಬಿಡುಗಡೆ ಮಾಡಿದರೆ ಹೇಗೆ? ಹೀಗಾದರೆ ನೀವು ಜನಗಳಿಗೆ ಹೇಗೆ ಕುಡಿಯುವ ನೀರು ಕೊಡುತ್ತೀರಿ? ಟ್ಯಾಂಕರುಗಳ ಮೂಲಕ ನೀರು ಕೊಡುವುದಷ್ಟಕ್ಕೆ ಮಾತ್ರ ಖರ್ಚು ಮಾಡಿ, ಜಾನುವಾರುಗಳಿಗೆ ಗೋಶಾಲೆಗಳಲ್ಲಿ ಮೇವು ಪೂರೈಕೆಗೆ ಮಾತ್ರ ಖರ್ಚು ಮಾಡಿ ಎಂದು ಹೇಳಿದ್ದೀರಿ. ರಾಜ್ಯದಲ್ಲಿ ಇರುವುದೇ ಐದು ಗೋಶಾಲೆಗಳು. 199 ಹಳ್ಳಿಗಳಿಗೆ ಟ್ಯಾಂಕರುಗಳ ಮೂಲಕ ನೀರನ್ನು ಕೊಡುತ್ತಿದ್ದೀರಿ. ಇನ್ನು ಬೇರೆಯವರೆಲ್ಲ ಕುಡಿಯುವ ನೀರಿಗೆ ಏನು ಮಾಡಬೇಕು? ನಿಮ್ಮ ಯಾವ ಡಿಸ್ಟ್ರಿಕ್ಟ್ ಇನ್‌ಚಾರ್ಜ್ ಮಿನಿಸ್ಟರ್ ಸಹ ಒಂದು ರಿವ್ಯೂ ಮೀಟಿಂಗ್ ಮಾಡುವುದಿಲ್ಲ. ಕುಡಿಯುವ ನೀರಿನ ಬಗ್ಗೆ ಮೀಟಿಂಗ್ ಮಾಡುವುದಿಲ್ಲ, ಕೆ.ಡಿ.ಪಿ ಮೀಟಿಂಗ್ ಮಾಡುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಂದೇ ಒಂದು ಕೆ.ಡಿ.ಪಿ. ಮೀಟಿಂಗ್ ಆಗಿದೆ. Since three years only one K.D.P. meeting has done. Mr. Ramdas is supposed to be very active minister. ಅಲ್ಲಿ ಇದುವರೆಗೆ ಒಂದೇ ಒಂದು ಕೆ.ಡಿ.ಪಿ. ಮೀಟಿಂಗ್ ಆಗಿದೆ. ಇಲ್ಲಿ ನಮ್ಮ ಜಿಲ್ಲೆಯ ಎಂ.ಎಲ್.ಎ. ಗಳೆಲ್ಲಾ ಇದ್ದಾರೆ. ಜಿಲ್ಲೆಯಲ್ಲಿ ಕುಡಿಯುವ ನೀರು ಇದೆಯೋ, ಇಲ್ಲವೋ ಎಂದು ಒಂದು ದಿನವೂ ಚರ್ಚೆ ಮಾಡಿಲ್ಲ.

Dr. H.C. MAHADEVAPPA:- For rural development of the district,. ಪ್ರತಿ ಮೂರು ತಿಂಗಳಿಗೊಂದು ಕೆ.ಡಿ.ಪಿ. ಮೀಟಿಂಗ್‌ಅನ್ನು ಜಿಲ್ಲಾ ಪಂಚಾಯತಿಯಲ್ಲಿ ಮಾಡಬೇಕು. ಇದರ ಬಗ್ಗೆ ಸೀರಿಯಸ್ ಆಗಿಲ್ಲದೇ ಇರುವುದರಿಂದ, no district is being reviwing in the

meetings for every three months. ಇದರಿಂದ ಏನಾಗುತ್ತಿದೆ ಎಂದರೆ, ಹಣ ಎಷ್ಟು ಕೊಟ್ಟರೂ, ಎಷ್ಟು ಖರ್ಚಾಯಿತು, ಜನರ ಸಮಸ್ಯೆ ಏನಿದೆ ಎನ್ನುವುದನ್ನು ತಿಳಿದುಕೊಳ್ಳಲೂ ಆಗದೇ ಇವತ್ತು ಎಲ್ಲರೂ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. They are not at all serious in tackling the problems and issues at district level and taluk levels.

ಶ್ರೀ ಸಿದ್ದರಾಮಯ್ಯ:- ಈ ಗೈಡ್‌ಲೈನ್ಸ್ ಜಿಲ್ಲಾಧಿಕಾರಿಗಳಿಗೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ಹೋಗಿದೆ. ಅದನ್ನು ಜಿಲ್ಲಾಧಿಕಾರಿಗಳು ಬರೆದು ನನಗೆ ಕಳುಹಿಸಿದ್ದಾರೆ. ನಾವು ಹಳ್ಳಿಗಳಿಗೆ ಹೋದರೆ ಅಲ್ಲಿ ಜನರು ಕುಡಿಯಲು ನೀರಿಲ್ಲ ಎಂದು ಹೇಳುತ್ತಾರೆ. ಆದರೆ ಸರ್ಕಾರದವರು ಈ ರೀತಿ ಸುತ್ತೋಲೆಗಳನ್ನು ಕಳುಹಿಸುತ್ತಾರೆ. 30 ಲಕ್ಷ ಬಿಡುಗಡೆ ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಅದು ಖರ್ಚಾಗಬಾರದು, ಆ ದುಡ್ಡು ಅಲ್ಲೇ ಇರಬೇಕು, ಆ ರೀತಿ ಗೈಡ್‌ಲೈನ್ಸ್ ಕಳುಹಿಸುತ್ತಾರೆ. ಮಾತೆತ್ತಿದರೆ ಸಾಕು, ಮುಖ್ಯಮಂತ್ರಿಗಳು, ರೆವಿನ್ಯೂ ಮಂತ್ರಿಗಳು ಮತ್ತು ಬೇರೆ ಮಂತ್ರಿಗಳು ಪಿ.ಡಿ. ಅಕೌಂಟಿನಲ್ಲಿ ದುಡ್ಡಿದೆ ಎಂದು ಹೇಳುತ್ತಾರೆ. ಅದನ್ನು ಉಪ್ಪಿನಕಾಯಿ ಹಾಕಿಕೊಂಡು ನೆಕ್ಕಲು ಆಗುತ್ತದೆಯೇ? ಕುಡಿಯುವ ನೀರಿಗೆ ಖರ್ಚು ಮಾಡಲು ದುಡ್ಡು ಕೊಡದಿದ್ದ ಮೇಲೆ ಪಿ.ಡಿ. ಅಕೌಂಟಿನಲ್ಲಿ ದುಡ್ಡಿದೆ ಎಂದು ಹೇಳಿದರೆ ಏನು ಪ್ರಯೋಜನ? ಡಿ.ಸಿ.ಗಳು ಅದಕ್ಕೆ ಬೀಗ ಹಾಕಿಕೊಂಡು ಕುಳಿತಿದ್ದಾರೆ. ಅದನ್ನು ಅವರು ತೆಗೆಯುವ ಹಾಗಿಲ್ಲ. ನಮ್ಮ ಜಿಲ್ಲೆಯಲ್ಲಿ 9 ಲಕ್ಷ ರೂಪಾಯಿ ಮಾತ್ರವಿದೆ. As on today, for the entire district only 9 lakh is there. ಮೈಸೂರು ಜಿಲ್ಲೆಯಲ್ಲಿ ಏಳು ತಾಲ್ಲೂಕುಗಳಿದ್ದು, ಏಳೂ ತಾಲ್ಲೂಕುಗಳಲ್ಲಿ ಬರಗಾಲವಿದೆ. All the seven talukas are under draught. ಏನು ಮಾಡಬೇಕು ಹೇಳಿ. ಈ ಸರ್ಕಾರಕ್ಕೆ ಏನಾದರೂ ಜವಾಬ್ದಾರಿ ಇದೆಯೇ? ಕುಡಿಯುವ ನೀರು ಕೊಡಬೇಕು ಎನ್ನುವ ಕಾಳಜಿ ಇದೆಯೇ? ನಿನ್ನೆಯ ರಾಜ್ಯಪಾಲರ ಭಾಷಣವನ್ನು ಕೇಳಿದರೆ ಬರಗಾಲವನ್ನು ನಾವು ಸಮರ್ಥವಾಗಿ ಎದುರಿಸಿದ್ದೇವೆ, ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಿದ್ದೇವೆ ಎಂದು ಹೇಳಿದ್ದೀರಿ. ಎಲ್ಲಿ ಎದುರಿಸಿದ್ದೀರಿ?

ರಾಜ್ಯಪಾಲರ ಭಾಷಣದಿಂದ ಕುಡಿಯುವ ನೀರು ಸಿಗುತ್ತದೆಯೇ? ಆ ತರಹ ಓದಿದರೆ ಬರುತ್ತದೆಯೇ? ಸರ್ಕಾರದ ಭಾಷಣವಿದು. In entire Karnataka ಎಲ್ಲಾ ಜಿಲ್ಲೆಗಳಲ್ಲಿ ಇದೇ ಪರಿಸ್ಥಿತಿ ಇದೆ. 24–25 ಜಿಲ್ಲೆಗಳಲ್ಲೂ ಕೂಡ ಎಲ್ಲೆಲ್ಲಿ ಬರಗಾಲವಿದೆ, ಅಲ್ಲಿ ಎಲ್ಲಾ ಕಡೆ ಇದೇ ಪರಿಸ್ಥಿತಿ ಇದೆ. ಬೇರೆ ಜಿಲ್ಲೆಗಳಲ್ಲೂ ಇದೇ ಪರಿಸ್ಥಿತಿ ಇದೆ. ನಿಮ್ಮ ಜಿಲ್ಲೆಯಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. Speaker ರವರ ಕ್ಷೇತ್ರದ ಹಳ್ಳಿಗಳಲ್ಲೂ ಕೂಡ ಕುಡಿಯುವ ನೀರಿನ ಸಮಸ್ಯೆ ಇದೆ. ಮಾನ್ಯ ಅಧ್ಯಕ್ಷರೆ, ಸಮಸ್ಯೆ ಇಲ್ಲವೇ, ಇದೆ. ನೀವು ಸ್ವಲ್ಪ ಈಗ ನಮ್ಮ ಜೊತೆ ನಿಲ್ಲಬೇಕು. Task Force ಗೆ ಈಗ MLA ಅಧ್ಯಕ್ಷರಿದ್ದಾರೆ. ಅಧಿಕಾರಿಗಳು ಹಣವಿಲ್ಲವೆಂದು ಹೇಳಿದರೆ MLA ಗಳು meeting ಮಾಡಿ ಏನು ಮಾಡುತ್ತಾರೆ? ನಾವು meeting ಮಾಡಿ ಶಿಫಾರಸ್ಸು ಮಾಡುತ್ತೇವೆ. ಹೊಸದಾಗಿ ಒಂದು ಬೋರ್‌ವೆಲ್ ತೋಡುವುದಕ್ಕಾಗುವುದಿಲ್ಲ. ಅಗತ್ಯ ಎಲ್ಲೆಲ್ಲಿ ಇದೆ ಅಲ್ಲಿ ಮಾತ್ರ ಬೋರ್‌ವೆಲ್ ಕೊರೆಯಿರಿ ಎಂದು ಹೇಳುತ್ತಾರೆ. ಕುಡಿಯುವ ನೀರಿಗೆ ಬೋರ್‌ವೆಲ್‌ಗೆ 90% source ಇರುವುದು underground water ನಿಂದ. ಅದು ಬತ್ತಿ ಹೋಗಿದೆ. ಆಗ ಏನು ಮಾಡಬೇಕು? ಯಾವುದೋ ಊರಿನಲ್ಲಿ 2–3 ಬೋರ್‌ವೆಲ್‌ಗಳಿದ್ದರೆ, ಅವೆಲ್ಲ ಈಗ dry up ಆಗಿದ್ದರೆ, ಆಗ ಏನು ಮಾಡಬೇಕು? ಇವರು ಎಲ್ಲಾ ಊರುಗಳಿಗೂ tanker ಗಳ ಮೂಲಕ ನೀರು ಕೊಡುವುದಕ್ಕಾಗುತ್ತದೆಯೇ? Tanker ಮೂಲಕ ನೀರು ಕೊಟ್ಟು ಜನರನ್ನು ಸಮಾಧಾನ ಮಾಡುವುದಕ್ಕಾಗುತ್ತದೆಯೇ? ಜನರು ಕಚ್ಚಾಡಿ, ಹೊಡೆದಾಡಿಬಿಡುತ್ತಾರೆ. ಆ tanker ಬಂದ ತಕ್ಷಣವೇ ಜನರು ಮೈಮೇಲೆ ಬಿದ್ದು, ಹೆಣ್ಣುಮಕ್ಕಳೆಲ್ಲ ಜಗಳವಾಡಿಕೊಂಡು, ಕಿತ್ತಾಡಿಬಿಡುತ್ತಾರೆ. ಇವರ ಕೈಯಿಂದ ಸಾಕಷ್ಟು ನೀರು ತೆಗೆದುಕೊಂಡು ಹೋಗಿ ಕೊಡುವುದಕ್ಕಾಗುವುದಿಲ್ಲ. Tanker ಮೂಲಕ ನೀರು ಕೊಡುತ್ತೇವೆ ಎನ್ನುವುದು ಸುಮ್ಮನೆ ಕಣ್ಣೊರೆಸುವ ತಂತ್ರ. ಕರ್ನಾಟಕದಲ್ಲಿ 29 ಸಾವಿರ ಹಳ್ಳಿಗಳಿವೆ. 29 ಸಾವಿರಗಳಲ್ಲಿ ನಾವು 199 ಹಳ್ಳಿಗಳಿಗೆ tanker ಮೂಲಕ ನೀರು ಕೊಡುತ್ತೇವೆಂದರೆ 29 ಸಾವಿರ

ಹಳ್ಳಿಗಳಲ್ಲಿ 199 ಹಳ್ಳಿಗಳು ಎಂದರೆ ಎಷ್ಟು ಪರ್ಸೆಂಟ್ ಆಯಿತು? ನಾನು ನನ್ನ ಕ್ಷೇತ್ರದಲ್ಲಿ 2–3 ಕಡೆ ಹೋಗಿದ್ದೆ. Every village is facing acute drinking water problem. ನಾವು ತೋಡಿಸಿದ ಬೋರ್‌ವೆಲ್‌ಗಳೆಲ್ಲ ಒಣಗಿಹೋಗಿವೆ. ನಾನು ಅದಕ್ಕೇ ಹೇಳಿದೆ. ಕುಡಿಯುವ ನೀರಿನ ಸಲುವಾಗಿ ರಾಜ್ಯ ಸರ್ಕಾರದಿಂದ ಹಣ ಕೊಡಿ. ಎಲ್ಲಿ ನೀರು ಬರುತ್ತದೋ ಅಲ್ಲಿ ಬೋರ್‌ವೆಲ್ ಕೊರೆಸಿ ನೀರು ಕೊಡಿ. ಕೆಲವು ಕಡೆ fluoride ಸಮಸ್ಯೆಗಳಿವೆ. ಅಲ್ಲಿ de-fluoride plant ಗಳನ್ನು ಹಾಕಬೇಕೆಂದು ಹೇಳಿದೆವು. ಈ ಕೆಲಸ ಎಲ್ಲೂ ಮಾಡುತ್ತಿಲ್ಲ. ಕುಡಿಯುವ ನೀರಿನ ಸಲುವಾಗಿ ರಾಜ್ಯ ಸರ್ಕಾರದಿಂದಲೇ ಹಣ ಕೊಡಲಿ. ಕುಡಿಯುವ ನೀರಿನ ಸಲುವಾಗಿ ಪೂರ್ತಿ ಕೇಂದ್ರ ಸರ್ಕಾರದ ಮೇಲೆಯೇ ಏಕೆ ರಾಜ್ಯ depend ಆಗುತ್ತಿದೆ? ಈ ಸರ್ಕಾರ ಆಡಳಿತಕ್ಕೆ ಬಂದ ಮೇಲೆ, ಕಳೆದ ಎರಡು ವರ್ಷಗಳಲ್ಲಿ ರಾಜ್ಯಕ್ಕೆ ಬರಗಾಲ ಬಂದ ಮೇಲೆ ಈ ಸರ್ಕಾರ ಸ್ವಂತ ಹಣ ಎಷ್ಟು ಖರ್ಚು ಮಾಡಿದೆ ಎಂದು ಹೇಳಲಿ, ನೋಡೋಣ. ಮೇವು ಕೊಡಿಸುವ ಸಲುವಾಗಿ ಎಷ್ಟು ಹಣ ಖರ್ಚು ಮಾಡಿದ್ದಾರೆ? ಕುಡಿಯುವ ನೀರಿಗೆ ಎಷ್ಟು ಹಣ ಖರ್ಚು ಮಾಡಿದ್ದಾರೆ? ಜನರಿಗೆ ಉದ್ಯೋಗ ಕೊಡುವ ಸಲುವಾಗಿ ಎಷ್ಟು ಹಣ ಖರ್ಚು ಮಾಡಿದ್ದಾರೆ? NREGS ನಲ್ಲಿ ನಡೆಯತಕ್ಕಂಥ ಕಾಮಗಾರಿಗಳನ್ನು ಬಿಟ್ಟರೆ ಒಂದು ರೂಪಾಯಿ ಸಹ ಅದಕ್ಕಿಂತ ಹೆಚ್ಚಾಗಿ ಖರ್ಚು ಮಾಡಿಲ್ಲ. ಕುಡಿಯುವ ನೀರಿನ ಸಲುವಾಗಿ ಕೇಂದ್ರ ಸರ್ಕಾರ ಕೊಟ್ಟಿರುವಂಥ ಹಣವನ್ನು ಸಹ ಇವರು, ರಾಜ್ಯ ಸರ್ಕಾರ ಖರ್ಚು ಮಾಡಿಲ್ಲ. 2011–12ರ ಸಾಲಿನಲ್ಲಿ ಕುಡಿಯುವ ನೀರಿನ ಸಲುವಾಗಿ ಖರ್ಚು ಮಾಡುವುದಕ್ಕೆ 1500 ಕೋಟಿ ರೂಪಾಯಿಗಳ target ನೀಡಲಾಗಿತ್ತು. ಇದು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಪಾಲುದಾರಿಕೆಯಲ್ಲಿ ನಡೆಯತಕ್ಕಂಥದ್ದು. ನಾನು regular programme ಕುರಿತು ಹೇಳುತ್ತಿರುವುದು. This is a regular programme. 2011–12ರ ಸಾಲಿನಲ್ಲಿ ಕುಡಿಯುವ ನೀರಿಗೆ 1500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, ಭೀಕರವಾದ ಬರಗಾಲ ಇದ್ದರೂ ಕೂಡ ಖರ್ಚು

ಮಾಡಿರುವುದು ಕೇವಲ 1100 ಕೋಟಿ ರೂಪಾಯಿಗಳು ಮಾತ್ರ. ಅಂದರೆ ಇನ್ನೂ ಸಹ 400 ಕೋಟಿ ರೂಪಾಯಿಗಳನ್ನು ಈ ಸರ್ಕಾರದಿಂದ ಖರ್ಚು ಮಾಡಲಿಕ್ಕೆ ಆಗಲಿಲ್ಲ. ಕೇಂದ್ರ ಸರ್ಕಾರ ಕೊಟ್ಟಂಥ ಹಣವನ್ನು ಸಹ ಇವರು ಖರ್ಚು ಮಾಡಲಿಲ್ಲ. ಇವರಿಗೆ ಕುಡಿಯುವ ನೀರು ಕೊಡಬೇಕೆನ್ನುವ ಕಿಂಚಿತ್ತು ಕಾಳಜಿ ಆದರೂ ಇದೆಯೇ? ಇವರಿಗೆ ಬದ್ಧತೆ ಇದೆಯೇ? ಇವರ ಜಗಳದಲ್ಲಿ ಕುರ್ಚಿ ಉಳಿಸಿಕೊಳ್ಳುವುದೇ ಇವರಿಗೆ ಕಷ್ಟವಾಗಿಬಿಟ್ಟಿದೆ. ಯಾವ ಅಧಿಕಾರಿಗಳೂ ಸಹ ಹೋಗುವುದಿಲ್ಲ. ಪ್ರತಿ ಜಿಲ್ಲೆಗೆ ಒಬ್ಬೊಬ್ಬ ಅಧಿಕಾರಿಯನ್ನು ನೇಮಿಸಿದ್ದಾರೆ. ಯಾವ ಅಧಿಕಾರಿಯೂ ಹೋಗುವುದಿಲ್ಲ, review ಮಾಡುವುದಿಲ್ಲ. ಜಿಲ್ಲೆ ಮಂತ್ರಿಯವರು review ಮಾಡುವುದಿಲ್ಲ. ಹೀಗಾದರೆ ಕುಡಿಯುವ ನೀರು ಎಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ? ನಾವು ಇಷ್ಟೆಲ್ಲ ಹೇಳಿದರೂ ಕೂಡ 'ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ' ಎನ್ನುವ ತರಹ ಈಗ ಆಗಿಬಿಟ್ಟಿದೆ. ಇವರಿಗೆ thick skin ಆಗಿಬಿಟ್ಟು ಏನಾದರೂ ಹೇಳಿಕೊಳ್ಳಲಿ ನಾವು ಮಾಡುವುದನ್ನು ಮಾಡಿಕೊಂಡು ಹೋಗೋಣ ಎನ್ನುವ ತರಹ ಆಗಿಹೋಗಿಬಿಟ್ಟಿದೆ. This type of attitude ಇದೆಯಲ್ಲಾ it is a most dangerous attitude and most dangerous development. ಇದು ಆಗಬಾರದಿತ್ತು. ನಾನು ಎಲ್ಲವನ್ನೂ ಬಹಳ ದೀರ್ಘವಾಗಿ ಮಾತನಾಡುವುದಿಲ್ಲ. ಕುಡಿಯುವ ನೀರಿನದು ಮಾತ್ರ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ದೊಡ್ಡ ಹಾಹಾಕಾರ ಆಗಿದೆ. ಮಾನ್ಯ ಮುಖ್ಯಮಂತ್ರಿಯವರೆ, ದಯಮಾಡಿ ಇದರಲ್ಲಿ ಮೀನಾಮೇಷ ಎಣಿಸುವುದಕ್ಕೆ ಹೋಗಬೇಡಿ. ಕುಡಿಯುವ ನೀರಿಗೋಸ್ಕರ ಎಷ್ಟೇ ಹಣ ಖರ್ಚಾಗಲಿ, ಕೊಡುತ್ತೇವೆನ್ನುವಂಥ ಧೋರಣೆ ಸರ್ಕಾರಕ್ಕಿರಬೇಕು. Come what may, ಕುಡಿಯುವ ನೀರು ಮನುಷ್ಯರಿಗೆ first priority ಆಗಬೇಕು. ನೀರಿನಿಂದಲೇ ಆರೋಗ್ಯ ಇರುವುದು. ನೀರಿನಿಂದಲೇ ಆರೋಗ್ಯ ಕೂಡ ಕೆಡುವುದು. ಆದ್ದರಿಂದ ನಾನು ಒತ್ತಾಯ ಮಾಡುತ್ತೇನೆ, ಕೂಡಲೇ ಕನಿಷ್ಟ ಒಂದೊಂದು ತಾಲ್ಲೂಕಿಗೆ 2 ಕೋಟಿ ರೂಪಾಯಿಗಳನ್ನು ಈ ಕೂಡಲೇ ಬಿಡುಗಡೆ ಮಾಡುವ ತೀರ್ಮಾನ

ಮಾಡಬೇಕು. ಕೇವಲ 30 ಲಕ್ಷ ರೂಪಾಯಿಗಳನ್ನು ಕೊಟ್ಟು ಅದನ್ನೂ ಖರ್ಚು ಮಾಡಬೇಡಿ ಎಂದು ಹೇಳಿಬಿಟ್ಟಿದ್ದಾರೆ. ಅನೇಕ ಪಟ್ಟಣಗಳಲ್ಲಿ ಕೂಡ ಕುಡಿಯುವುದಕ್ಕೆ ನೀರಿಲ್ಲ. ಬೆಂಗಳೂರಿನಲ್ಲಿ ಜನರು ನೀರು ತರುವುದಕ್ಕೆ ಹೋಗುವ ದೃಶ್ಯವನ್ನು ನೋಡಿ. Water war ನಡೆಯುತ್ತಿದೆ. ಅನೇಕ ಪಟ್ಟಣಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಆದ್ದರಿಂದ, 1 ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿದ್ದೇವೆ ಎಂದು ಸರ್ಕಾರ ಬೆನ್ನು ತಟ್ಟಿಕೊಳ್ಳುವುದಲ್ಲ. ಜನಗಳಿಗೆ ಕುಡಿಯುವುದಕ್ಕೆ ನೀರೇ ಕೊಡದ ಮೇಲೆ ನೀವು 1 ಲಕ್ಷ ಕೋಟಿ ಬಜೆಟ್ ಅನ್ನಾದರೂ ಮಂಡಿಸಿ, 2 ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನಾದರೂ ಮಂಡಿಸಿ. ಜನರಿಗೆ ಕುಡಿಯುವುದಕ್ಕೆ ನೀರು ಇರಬೇಕಲ್ಲವೇ? ಕೇವಲ ಜಂಬ ಹೊಡೆದುಕೊಂಡರೆ ಏನಾಗುತ್ತದೆ? ನಮ್ಮ ಊರಿನಲ್ಲಿ ಒಬ್ಬ ಇದ್ದ. ಅವರು ಈಗ ಇಲ್ಲ, ಸತ್ತು ಹೋಗಿದ್ದಾನೆ. ಅವನು ಬಹಳ ಕಷ್ಟದಲ್ಲಿದ್ದ. ಆದರೆ, ಅವನು ಸ್ವಾಭಿಮಾನಿ. ಅವನು ಹೊರಗಡೆ ಬರುವಾಗ ದೊಡ್ಡದಾಗಿ ಮೀಸೆ ಬಿಟ್ಟುಕೊಂಡಿದ್ದ. ನಿಮ್ಮ ಕಡೆ ಮೀಸೆ ಬಿಟ್ಟುಕೊಳ್ಳುತ್ತಾರಲ್ಲ ಹಾಗೆ ದೊಡ್ಡ ಮೀಸೆ ಬಿಟ್ಟುಕೊಂಡಿದ್ದ. ಮೀಸೆ ಮೇಲೆ ಎರಡು ಅನ್ನದ ಅಗಳು ಇಟ್ಟುಕೊಂಡಿರುತ್ತಿದ್ದ. ಏನಯ್ಯ ಎಂದು ಕೇಳಿದರೆ ಈಗತಾನೇ ಅನ್ನ ಉಂಡುಕೊಂಡು ಬಂದಿದ್ದೇನೆ ಎಂದು ಹೇಳುತ್ತಿದ್ದ. ಆದರೆ, ಪಾಪ ಅವನಿಗೆ ಊಟಕ್ಕೇ ಇರಲಿಲ್ಲ. ಹಾಗೆ ಆಗಿಬಿಟ್ಟಿದೆ ಈ ಸರ್ಕಾರದ ಗತಿ. ಈ ಸರ್ಕಾರದವರಿಗೆ ಏನು ಹೇಳಿದರೂ ಅರ್ಥವಾಗುವುದಿಲ್ಲ. ಸಮಸ್ಯೆಗೆ ಪರಿಹಾರ ಕಂಡಿಹಿಡಿಯಬೇಕೆನ್ನುವಂಥ ಕಾಳಜಿ ಇದ್ದರೆ, ಬದ್ಧತೆ ಇದ್ದರೆ ಎಲ್ಲವೂ ಅರ್ಥವಾಗುತ್ತದೆ.

ಆ ಕಾಳಜಿಯೇ ಇಲ್ಲದೇ ಹೋದರೆ ಅರ್ಥವೂ ಆಗುವುದಿಲ್ಲ, ಕೆಲಸವೂ ಆಗುವುದಿಲ್ಲ. ಈಗ ಚುನಾವಣೆ ಬರುತ್ತಿದೆ. ನಾವು Constituencies ಗೆ ಹೋಗಲಾರದ ಪರಿಸ್ಥಿತಿ ಆಗಿದೆ. ಇವರು ಹೇಗೆ manage ಮಾಡುತ್ತಿದ್ದಾರೋ ನಮಗೆ ಗೊತ್ತಿಲ್ಲ. ಅವರು ಅಲ್ಲಿಗೆ ಹೋಗುತ್ತಲೇ ಇಲ್ಲ ಅಲ್ಲವೇ? ನೀವು ನಿಮ್ಮ ಕ್ಷೇತ್ರದಲ್ಲಿ ಅದು ಹೇಗೆ manage ಮಾಡುತ್ತೀರೋ

ಗೊತ್ತಿಲ್ಲ. ನಮಗಂತೂ ಹೋಗುವುದಕ್ಕೆ ಆಗುವುದಿಲ್ಲ. ಬಹಳ ತೊಂದರೆ ಆಗಿಬಿಟ್ಟಿದೆ. ನಾವು ಇನ್ನೂ February first week ನಲ್ಲಿದ್ದೇವೆ. March ತಿಂಗಳಲ್ಲಿ ಇನ್ನು severe ಆಗಿ ಆಗುತ್ತದೆ. April ತಿಂಗಳಲ್ಲಿ ಇನ್ನೂ severe ಆಗಿ ಆಗುತ್ತದೆ. March, April, May ತಿಂಗಳು ಅಂದರೆ ಇನ್ನೂ ಎರಡೂವರೆ ತಿಂಗಳು ನಾವು ಬಹಳ ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳುತ್ತೇವೆ. ಒಂದು ಕಡೆ current ಇಲ್ಲ. ಇವತ್ತು ಏನಾಗಿದೆ ಎಂದರೆ, 2 ಗಂಟೆ current ಸಿಕ್ಕಿದರೆ ಹೆಚ್ಚು. ಬಹಳಷ್ಟು Drinking Water Schemes current ಮೇಲೆ ಅವಲಂಬನೆಯಾಗಿರುತ್ತದೆ. 2 ಗಂಟೆ ಕೂಡ current ಇರುವುದಿಲ್ಲ. ನಿರಂತರ ಜ್ಯೋತಿ ಎಂದು bifurcate ಮಾಡಿದ್ದಾರೆ. Pumpset 3 phase current ಇದ್ದರೆ ಮಾತ್ರ ಓಡುತ್ತದೆ. ಆದರೆ, single phase ನಲ್ಲಿ ಇದೆಯಲ್ಲವೆ? ಅವು ಯಾವುದಕ್ಕೂ ಬರುವುದಿಲ್ಲ. ಈಗ ಶಾಲಾ ಮಕ್ಕಳಿಗೆ ಪರೀಕ್ಷೆ ಬರುತ್ತಿದೆ. ಅವರು ಓದಿಕೊಳ್ಳಬೇಕು. ನಾವು ಶುದ್ಧವಾದ ಕುಡಿಯುವ ನೀರು ಕೊಡುವುದಕ್ಕೆ ಆಗದಿದ್ದರೆ ರೋಗರುಜಿನಗಳು ಪ್ರಾರಂಭವಾಗುತ್ತವೆ. ಹಳ್ಳಿಗಳಲ್ಲಿ ಹಬ್ಬ, ಜಾತ್ರೆ ಪ್ರಾರಂಭವಾಗಿವೆ. ಅವರು ಯಾವುದೋ ನೀರನ್ನು ಕುಡಿಯುವುದರಿಂದ ರೋಗರುಜಿನ ಪ್ರಾರಂಭವಾಗುತ್ತದೆ. ಆದ್ದರಿಂದ, ನಾನು ಈ ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಈ ಕೂಡಲೇ 2 ಕೋಟಿ ರೂಪಾಯಿಗಳನ್ನು ಪ್ರತಿ ತಾಲ್ಲೂಕಿಗೆ ಬಿಡುಗಡೆ ಮಾಡಬೇಕು, ಜೊತೆಗೆ Task Force ನವರಿಗೆ ಕುಡಿಯುವ ನೀರಿನ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡಬೇಕು. Task Force ನಲ್ಲಿ ಅವರು ಏನೇನು ತೀರ್ಮಾನ ಮಾಡುತ್ತಾರೆ, ಅವೆಲ್ಲಕ್ಕೂ ಕೂಡ ಅವರಿಗೆ ಬೇಕಾದಷ್ಟು ಹಣವನ್ನು D.C., ಮತ್ತು A.C., ತಹಶೀಲ್ದಾರರಿಗೆ assist ಮಾಡತಕ್ಕಂಥದ್ದು, ಅವರಿಗೆ co-operate ಮಾಡುವ ಕೆಲಸ ಮಾಡಬೇಕು. ಇಲ್ಲದೇ ಹೋದರೆ ನಾವು ನೀರು ಕೊಡುವುದಕ್ಕೆ ಬಹಳ ಕಷ್ಟವಾಗುತ್ತದೆ. ದೊಡ್ಡ ಹಾಹಾಕಾರವಾಗಿದೆ. ರಾಜ್ಯದ ಜನರು ಅಮೇಲೆ ದಂಗೆ ಏಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಜನರು ಅನೇಕ ರೋಗರುಜಿನಗಳಿಗೆ ತುತ್ತಾಗುತ್ತಾರೆ. ನಾನು ಮಾನ್ಯ

ಮುಖ್ಯಮಂತ್ರಿಯವರು ಮತ್ತು ಕಂದಾಯ ಮಂತ್ರಿ ಇಬ್ಬರನ್ನೂ ಒತ್ತಾಯಿಸುತ್ತೇನೆ. ಕಂದಾಯ ಸಚಿವರೆ, ತಾವು RDPR ಖಾತೆಯನ್ನೂ ಹೊಂದಿದ್ದೀರಿ. ನಾನು ಬೇರೆ ವಿಚಾರ ಮಾತನಾಡಲಿಕ್ಕೆ ಹೋಗುವುದಿಲ್ಲ. ಕುಡಿಯುವ ನೀರಿಗೆ ಮಾತ್ರ ಸೀಮಿತವಾಗಿ ಹೇಳಿದ್ದೇನೆ. ಕೂಡಲೇ 2 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು. Power ಬಗ್ಗೆ ನಾನು ಇನ್ನೊಂದು ದಿವಸ ಮಾತನಾಡುತ್ತೇನೆ. ಹಳ್ಳಿಗಳಲ್ಲಿ ಇವತ್ತು Power ವಿಚಾರದಲ್ಲಿ ಬಹಳ ಕೆಟ್ಟ ಪರಿಸ್ಥಿತಿ ಇದೆ. ಶೋಭಾ ಕರಂದ್ಲಾಜೆಯವರು ಅವರ ಜೊತೆಯೇ current ತೆಗೆದುಕೊಂಡು ಹೋಗಿದ್ದಾರೋ, ಏನೋ ಗೊತ್ತಿಲ್ಲ. ಶೋಭಾರವರು ಈ ಇಲಾಖೆಯಿಂದ relieve ಆದ ಮೇಲೆ ಕರೆಂಟ್ ಇರುವುದಿಲ್ಲ ಎಂದು ಹೇಳಿದ್ದಾರಂತೆ. ಈ ಪರಿಸ್ಥಿತಿ ಇದೆ. ಇದು ಬಹಳ ಗಂಭೀರವಾದ ಪರಿಸ್ಥಿತಿ. ಇಂಥ ಗಂಭೀರ ಪರಿಸ್ಥಿತಿಯಲ್ಲಿ ಇದರಲ್ಲಿ ನಾವು ರಾಜಕೀಯ ಮಾಡಬೇಕೆಂದು ಹೇಳುವುದಿಲ್ಲ. ಇದನ್ನು ಸರ್ಕಾರ ಬಹಳ serious ಆಗಿ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಮಾಡದೇ ಹೋದರೆ ಜನರು ಬಹಳ ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತಾರೆ. ನಾವ್ಯಾರೂ ಕೂಡ ಜನರ ಬಳಿ ಹೋಗುವುದಕ್ಕೆ ಕಷ್ಟವಾಗುತ್ತದೆ. ನಾನು ಇಷ್ಟು ಹೇಳಿ ಮಾನ್ಯ ಮುಖ್ಯಮಂತ್ರಿಯವರು ಕೂಡಲೇ ಇದಕ್ಕೆ ಸ್ಪಂದಿಸುತ್ತಾರೆ ಎನ್ನುವ ವಿಶ್ವಾಸ ಇಟ್ಟುಕೊಂಡಿದ್ದೇನೆ. ಈಶ್ವರಪ್ಪನವರೆ, ನೀವು ಸ್ವಲ್ಪ ಒತ್ತಾಯ ಮಾಡಬೇಕು. ಕೇವಲ 30 ಲಕ್ಷ ರೂಪಾಯಿ ಬಿಡುಗಡೆ ಮಾಡಿದರೆ ಅದರಿಂದ ಏನೂ ಆಗುವುದಿಲ್ಲ. ಈಗ ನಾನು ಓದಿ ಹೇಳಿದೆನಲ್ಲ. ಈಗ ಎಲ್ಲಾ ಜಿಲ್ಲೆಗಳಲ್ಲೂ ಅದೇ ತರಹ ಆಗಿದೆ. Tanker ಮೂಲಕ ನೀರು ಕೊಡಿ, ಜಾನುವಾರುಗಳಿಗೆ ಮೇವು ಕೊಡಿ ಎಂದರೆ, ಕುಡಿಯುವ ನೀರಿನ ಎಲ್ಲಿಂದ ಕೊಡುವುದು? ಆದ್ದರಿಂದ, ಇದರಿಂದ ಆಗುವುದಿಲ್ಲ. ಕೂಡಲೇ ಇದಕ್ಕೆ ಬದಲಾವಣೆ ಮಾಡಿ ಎರಡೆರಡು ಕೋಟಿ ರೂಪಾಯಿಗಳನ್ನು ಕೊಡಬೇಕು. Task Force ನವರಿಗೆ Powers ಕೊಡಬೇಕು. ಕುಡಿಯುವ ನೀರು ಕೊಡಲಿಕ್ಕೆ ಏನು ಮಾಡಬೇಕೋ ಆ ಬಗ್ಗೆ ನೀವೇ ಕ್ರಮ ತೆಗೆದುಕೊಳ್ಳಿ ಎಂದು ಮಾಡಿ. ಅದರಲ್ಲಿ ಶಾಸಕರು ಇರುತ್ತಾರೆ, ಜವಾಬ್ದಾರಿಯಿಂದ

ಮಾಡುತ್ತಾರೆ. ಅವರ ಮೇಲೆ ವಿಶ್ವಾಸವಿಡಿ. ಅಧಿಕಾರಿಗಳ ಮೇಲೆ ವಿಶ್ವಾಸವಿಟ್ಟು, MLA ಗಳ ಮೇಲೆ ವಿಶ್ವಾಸವಿಡದಿದ್ದರೆ ಆಗುವುದಿಲ್ಲ. ಆದ್ದರಿಂದ, MLA ಗಳ ಮೇಲೆ ವಿಶ್ವಾಸವಿಡಿ. Task Force ನವರಿಗೆ ಜವಾಬ್ದಾರಿ ಕೊಡಿ. ಅವರಿಗೆ ಏನು ಬೇಕೋ ಮಾಡಿ ಎಂದು ಮತ್ತೆ ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ಒಂದು ನಿರ್ಣಯ ಇದೆ.

8. ನಿರ್ಣಯ

ವಿಷಯ: ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ):– ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ನಿರ್ಣಯವನ್ನು ಓದುತ್ತೇನೆ.

"ರಾಜ್ಯ ಚುನಾವಣಾ ಆಯೋಗವು 2001ರ ಜನಗಣತಿ ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಉದ್ದೇಶಿಸಿರುತ್ತದೆ. ಆದರೆ, ಈಗಾಗಲೇ 2011ರ ಜನಗಣತಿ ಕಾರ್ಯವು ಪೂರ್ಣಗೊಂಡಿದ್ದು, ಅದರ ಆಧಾರದ ಮೇಲೆ Ward ಗಳ ಮೀಸಲಾತಿಗಳಲ್ಲಿ ಬದಲಾವಣೆಯಾಗಿರುವುದರಿಂದ ಹಾಗೂ ಹಲವಾರು ಸ್ಥಳೀಯ ಸಂಸ್ಥೆಗಳು ನಗರಪಾಲಿಕೆ, ನಗರಸಭೆಗಳಾಗಿ ಬಡ್ತಿ ಹೊಂದಲು ಅರ್ಹತೆ ಪಡೆದಿರುವುದರಿಂದ ಮತ್ತು ಸರ್ಕಾರದ ಮೀಸಲಾತಿ ಕಾನೂನುಗಳಲ್ಲಿ ಬಹಳಷ್ಟು ತಿದ್ದುಪಡಿಗಳಾಗಿರುವುದರಿಂದ ನ್ಯಾಯಯುತ ಚುನಾವಣೆ ನಡೆಸಲು ಮತ್ತು ಎಲ್ಲ ವರ್ಗಗಳಿಗೆ ನ್ಯಾಯ ಒದಗಿಸಲು ಅನುವಾಗುವಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡಬೇಕೆಂದು ಈ ಸದನವು ರಾಜ್ಯ ಚುನಾವಣಾ ಆಯೋಗವನ್ನು ಒತ್ತಾಯಿಸುತ್ತದೆ"

ಅಧ್ಯಕ್ಷರು:– ಚರ್ಚೆ ಏನಾದರೂ ಉಂಟೇ?

ಶ್ರೀ ತನ್ವೀರ್ ಸೇಠ್:– ಸನ್ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ.